# ಮಾಧ್ಯಮ ಮಂಗಳ

ಸಂಪುಟ: 14 ಸಂಚಿಕೆ: 2

ದಿನಾಂಕ: 02-04-2018

ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ


## ಮಂಗಳೂರು ವಿವಿ ವಾರ್ಷಿಕ ಅಂತರ್-ವಿಭಾಗಿಯ ಕ್ರೀಡಾಕೂಟಕ್ಕೆ ಚಾಲನೆ

**ಮಂಗಳಗಂಗೋತ್ರಿ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರ ವಿಭಾಗಿಯ ಪುರುಷ ಮತ್ತು ಮಹಿಳೆಯರ ಅಥ್ಲೇಟಿಕ್ ಕ್ರೀಡಾಕೂಟ ಇತ್ತೀಚೆಗೆ ಜರುಗಿತು.

ಮೊದಲಿಗೆ ಪಥಸಂಚಲನ ಮಾಡುವುದರ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು ವಿವಿಧ ವಿಭಾಗದ ವಿದ್ಯಾರ್ಥಿಗಳು ವಿಶೇಷ ಉಡುಪಿನಲ್ಲಿ ಧ್ವಜ ಹಿಡಿದು ಪಥಸಂಚಲನದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅತ್ಯಂತ ಅಚ್ಚುಕಟ್ಟಾಗಿ ಅನಾವರಣಗೊಳಿಸಿದರು ರಂಗು ರಂಗಿನ ಉಡುಪು ಧರಿಸಿದ್ದ ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಮೆರಗು ತಂದಿದ್ದರು

ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಆಗಮಿಸಿದ್ದ ವಿವಿಯ ಗೌರವಾನ್ವಿತ ಕುಲಪತಿಗಳಾದ ಪ್ರೋ ಕೆ. ಭೈರಪ್ಪ ಮತ್ತು ಡಾ. ಕಿಶೋರ್ ಕುಮಾರ್ ಸಿ ಕೆ, ಅಧ್ಯಕ್ಷರು ವಿವಿಯ ಸ್ಪೋರ್ಟ್ಸ್ ಕಮಿಟಿ ಮತ್ತು ಇತರರು ಹಾಜರಿದ್ದರು.

ವಿವಿಯ ಕುಲಪತಿ ಪ್ರೊ. ಕೆ. ಭೈರಪ್ಪ ಇವರು ಕಾರ್ಯಕ್ರಮವನ್ನು ಉದ್ಘಾಟಿಸುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು



ಮಂಗಳೂರು ವಿವಿ ಅಂತರ ವಿಭಾಗ ಕ್ರೀಡಾಕೂಟವನ್ನು ಉದ್ಘಾಟಿಸುತ್ತಿರುವ ವಿವಿ ಕುಲಪತಿ ಪ್ರೊ. ಕೆ. ಭೈರಪ್ಪ. ಚಿತ್ತದಲ್ಲಿ ವಿವಿ ಸ್ಪೋರ್ಟ್ಸ್ ಕಮಿಟಿ ನಿರ್ದೇಶಕ ಡಾ. ಸಿ. ಕೆ. ಕಿಶೋರ್ ಕುಮಾರ್ ಮೊದಲಾದವರನ್ನು ಕಾಣಬಹುದು

ನಂತರ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ವಿವಿಧ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮಲ್ಲಿರುವ ವಿಶೇಷ ಪ್ರತಿಭೆಗಳ ಅನಾವರಣಕ್ಕೆ ಮಂಗಳೂರು ವಿವಿ ಕ್ರೀಡಾಂಗಣ ಸಾಕ್ಷಿಯಾಯಿತು.

ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಚಿನ್ನ, ಬೆಳ್ಳಿ ಹಾಗೂ ಕಂಚು ಬಹುಮಾನ ವಿತರಿಸಲಾಯಿತು

ವಿಶೇಷವೆಂದರೆ, ಸಿಬ್ಬಂದಿವರ್ಗದವರಿಗೆ ಪ್ರತ್ಯೆಕವಾಗಿ ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ವಿವಿಧ ವಿಭಾಗದ ಮಹಿಳಾ ಮತ್ತು ಪುರುಷ ಸಿಬ್ಬಂದಿಗಳು ಅತ್ಯಂತ ಆಸಕ್ತಿಯಿಂದ ಭಾಗವಹಿಸುವ ಮೂಲಕ ಕ್ರೀಡಾಕೂಡಕ್ಕೆ ಮತ್ತಷ್ಟು ಕಳೆ ತುಂಬಿದರು ಅವರಿಗೂ ಕೂಡ ಪದಕಗಳನ್ನು ವಿತರಿಸಲಾಯಿತು.

ಡಿಜೆ ಸ್ಪರ್ಧೆಯಲ್ಲಿ ವಿವಿಧ ವಿಭಾಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಪ್ರತ್ಯೇಕವಾಗಿ ಭಾಗವಹಿಸಿ ಡಿಜೆ ಹಾಡುಗಳಿಗೆ ಹೆಜ್ಜೆಹಾಕುವ ಮೂಲಕ ಮನರಂಜನೆ ನೀಡಿದರು ಉತ್ತಮವಾಗಿ ನೃತ್ಯಮಾಡಿದ ತಂಡಗಳಿಗೆ ಪಾರಿತೋಷಕ ನೀಡಲಾಯಿತು

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಡಾ. ಸಿ. ಕೆ. ಕಿಶೋರ್ ಕುಮಾರ್ ವಹಿಸಿದ್ದರು. ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ನಾಗೆಂದ್ರ ಪ್ರಸಾದ್ ವಿವಿಧ ವಿಭಾಗದ ವಿದ್ಯಾರ್ಥಿಗಳಿಗೆ ಮತ್ತು ಚಾಂಪಿಯನ್ ಮತ್ತು ರನ್ನರ್ ಅಪ್ ವಿಭಾಗಗಳಿಗೆ ಪಾರಿತೊಷಕ ವಿತರಿಸಿದರು.

## "ಉದ್ಯೋಗ ಸೃಷ್ಟಿಯಲ್ಲಿ ಸಂಖ್ಯಾಶಾಸ್ತ್ರ ವಿಷಯ ಮಹತ್ವದ ಸ್ಥಾನವಹಿಸಲಿದೆ": ಕೆ.ಸುಧೀರ್ ಆಚಾರ್



ಸಂಖ್ಯಾಶಾಸ್ತ ವಿಭಾಗವು ಆಯೋಜಿಸಿದ್ದ 'ಆವಿಷ್ಕಾರ-2018', ಅಂತರ್ ಕಾಲೇಜು ಸ್ಪರ್ಧೆಗಳನ್ನು ಉದ್ಘಾಟಿಸುತ್ತಿರುವ ದತ್ತಾಂಶ ವಿಶ್ಲೇಷಕ ಕೆ. ಸುಧೀರ್‌ಆಚಾರ್. ಚಿತ್ರದಲ್ಲಿ ಪ್ರೊ. ಇಸ್ಮಾಯಿಲ್ ಹಾಗೂ ಮತ್ತಿತರನ್ನು ಕಾಣಬಹುದು.

**ಮಂಗಳಗಂಗೋತ್ರಿ:** "ಇನ್ನು ಹತ್ತರಿಂದ ಹದಿನೈದು ವರ್ಷಗಳಲ್ಲಿ ಉದ್ಯೋಗಗಳ ಸೃಷ್ಟಿ ಕ್ಷೇತ್ರವಾಗಿ ಸಂಖ್ಯಾಶಾಸ್ತ್ರವು ಮಹತ್ವದ ಪಾತ್ರ ವಹಿಸಲಿದೆ. ಸುಮಾರು 1,80,000 ಉದ್ಯೋಗಗಳು ಈ ವಲಯದಲ್ಲಿ ದೊರಕಬಹುದೆಂದು ಊಹಿಸಲಾಗಿದೆ". ಎಂದು ಮೈನ್ಡ್.ಟ್ರೀ ಸಂಸ್ಥೆಯ ಮುಖ್ಯ ದತ್ತಾಂಶ ವಿಶ್ಲೇಷಕ ಕೆ. ಸುಧೀರ್‌ಆಚಾರ್ ಅವರು ಆಶಯ ವ್ಯಕ್ತಪಡಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರದ ವಿಭಾಗದಿಂದ ಆಯೋಜಿಸಲಾದ 'ಆವಿಷ್ಕಾರ-2018', ಅಂತರ್ ಕಾಲೇಜು ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗದಾಯಿ ಅಧ್ಯಯನವೇ ಮುಖ್ಯವಾಗಿದೆ. ಹಾಗಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರ ವಿದ್ಯಾರ್ಥಿಗಳು ಮತ್ತಷ್ಟು ಅಧ್ಯಯನದತ್ತ ಗಮನ ಹರಿಸಬೇಕು, ಅದರಿಂದ ಒಳ್ಳೆಯ ಕೌಶಲ್ಯ ಬೆಳೆಸಿಕೊಂಡು ಭವಿಷ್ಯದಲ್ಲಿ ಉತ್ತಮ ಸ್ಥಾನಮಾನಗಳನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಇಸ್ಮಾಯಿಲ್ ಮಾತನಾಡಿ "ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಸಂಖ್ಯಾಶಾಸ್ತ್ರ ಪರಿಣಿತರಿಗೆ ಅವಕಾಶವಿದೆ. ಸಂಖ್ಯಾಶಾಸ್ತ್ರ ದತ್ತಾಂಶ ವಿಶ್ಲೇಷಣೆಯಿಲ್ಲದ ಯಾವುದೇ ಶಿಸ್ತು ಲಭ್ಯವಿಲ್ಲ"ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.

## ತಂತ್ರಜ್ಞಾನ ಸಮಾಜದ ಒಳಿತಿಗೆ ಬಳಕೆಯಾಗಬೇಕು: ಪ್ರೊ.ಸುರೇಶ್

**ಮಂಗಳಗಂಗೋತ್ರಿ:** ಸಮಾಜದ ಉದ್ಧಾರಕ್ಕಾಗಿ ಆಧುನಿಕ ತಂತ್ರಜ್ಞಾನ, ಶಿಕ್ಷಣ ಬಳಕೆಯಾಗಬೇಕು ಕಲಿಕೆಯ ಅಂತಿಮ ಗುರಿ ಸಾಮುದಾಯಿಕ ಅಭಿವೃದ್ಧಿ ಆಗಿರಬೇಕು ಎಂದು ನಾನ್ಯಾಂಗ್ ತಾಂತ್ರಿಕ ವಿಶ್ವವಿದ್ಯಾನಿಲಯ ಅಧ್ಯಕ್ಷ ಹಾಗೂ ಸಿಂಗಾಪೂರದ ಮತ್ತು ಅಮೇರಿಕದ ಅಧ್ಯಕ್ಷರ ಮಾಜಿ ಸಲಹೆಗಾರ ಪ್ರೊ.ಸುಬ್ರ ಸುರೇಶ್ ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ 36ನೇ ಘಟಿಕೋತ್ಸವದಲ್ಲಿ ಅವರು ಘಟಿಕೋತ್ಸವದ ಭಾಷಣ ಮಾಡಿದರು. ನಾಲ್ಕನೇಯ ಕೈಗಾರಿಕ ಕ್ರಾಂತಿ ಬೌದ್ಧಿಕ ಜಗತ್ತು, ತಂತ್ರಜ್ಞಾನ ಜಗತ್ತು ಹಾಗೂ ಜೈವಿಕ ಜಗತ್ತನ್ನು ಆವರಿಸಿ ಕೊಂಡು ಸಾಗಲಿದೆ.

ವ್ಯಕ್ತಿಗತವಾಗಿ ಮತ್ತು ಸಾಮಾಜಿಕವಾಗಿ ತಂತ್ರಜ್ಞಾನ ಮತ್ತು ಮಾನವಿಯತೆಯ ನಡುವೆ ಎಚ್ಚರಿಕೆಯ ಸಮತೋಲನವನ್ನು ಕಾಯ್ದುಕೊಂಡಾಗ ತಂತ್ರಜ್ಞಾನದ ಗರಿಷ್ಟ ಲಾಭವನ್ನು ಪಡೆದುಕೊಳ್ಳಬಹುದು ಮತ್ತು ದುಷ್ಪರಿಣಾಮಗಳನ್ನು ಕನಿಷ್ಠಗೊಳಿಸಬಹುದು. ಈ ಹಿಂದಿನ ಮೂರು ಕೈಗಾರಿಕ ಕ್ರಾಂತಿ ಕೂಡಾ ಸಾಕಷ್ಟು ಜನರ ಉದ್ಯೋಗಕ್ಕೆ ಕನ್ನ ಹಾಕಿ ಲಕ್ಷಾಂತರ ಜನರ ಜೀವನಧಾರ ವೃತ್ತಿಗೆ ಕುತ್ತು ತಂದಿದೆ ಎಂದು ಅವರು ವಿವರಿಸಿದರು.

ಇಂದಿನ ಜ್ಞಾನಾಧಾರಿತ ಯುಗದಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣದ ಉದ್ದೇಶ ಕೇವಲ ಶ್ರೆಯಾಂಕ ಪಡೆಯುವುದು, ಕೋರ್ಸ್‌ಗಳನ್ನು ಹೊಂದುವುದು ಅಥವಾ ಉದ್ಯೋಗಾವಕಾಶಗಳನ್ನು




ಮಂಗಳೂರು ವಿವಿಯ 36ನೇ ಘಟಿಕೋತ್ಸವದಲ್ಲಿ ವಿವಿ ಕುಲಪತಿ ಪ್ರೊ. ಬೈರಪ್ಪ ಅವರಿಂದ ಗೌರವ ಡಾಕ್ಟರೇಟ್ ಸ್ವೀಕರಿಸುತ್ತಿರುವ ನಾನ್ಯಾಂಗ್ ತಾಂತ್ರಿಕ ವಿಶ್ವವಿದ್ಯಾನಿಲಯ ಅಧ್ಯಕ್ಷ ಪ್ರೊ. ಸುಬ್ರ ಸುರೇಶ್. ಚಿತ್ರದಲ್ಲಿ ಮಂಗಳೂರು ವಿವಿ ಪರಿಕ್ಷಾಂಗ ಕುಲಸಚಿವ ಪ್ರೊ. ಎ. ಎಂ. ಖಾನ್ ಅವರನ್ನು ಕಾಣಬಹುದು.

ಪಡೆದು ಜೀವನಾಧಾರ ಭದ್ರತೆಯನ್ನು ಗಳಿಸುವುದು ಮಾತ್ರವಲ್ಲ ಜ್ಞಾನ ಮತ್ತು ಕೌಶಲ್ಯಗಳ ನಿರಂತರ ಉನ್ನತೀಕರಣ, ರಜನಾತ್ಮಕ ಪ್ರಜೆಯಾಗಿ ಸಾಮಾಜಿಕ ಸ್ಪಂದನೆಗೆ ಮಾರ್ಗದರ್ಶಕವಾಗುವುದು ಕೂಡ ವಿಶ್ವವಿದ್ಯಾನಿಲಯ ಶಿಕ್ಷಣ ಗುರಿಯಾಗಿರಬೇಕು ಎಂದರು.

ವಿಜ್ಞಾನ ತಂತ್ರಜ್ಞಾನದೊಂದಿಗೆ ಕಲೆ, ಸಂಸ್ಕೃತಿಗಳನ್ನು ಒಳಗೊಂಡು ಸಾಮುದಾಯಿಕ ಸೇವೆಯೊಂದಿಗೆ ಸಮತೋಲಿತ ಜೀವನ ಸಾಗಿಸಲು ಸಾಧ್ಯವಾಗುವ ಮೂಲ ಕೌಶಲ್ಯಗಳನ್ನು ಪಡೆದುಕೊಳ್ಳುವುದೇ ಉನ್ನತ ಶಿಕ್ಷಣದ ಮುಖ್ಯ ಉದ್ದೇಶ ಎಂದು ಪ್ರೊ. ಸುಬ್ರ ಸುರೇಶ್ ಅಭಿಪ್ರಾಯಪಟ್ಟರು.

ಘಟಿಕೋತ್ಸವದಲ್ಲಿ ಮಂಗಳೂರು ವಿವಿ ಯಿಂದ 97 ಮಂದಿಗೆ ಡಾಕ್ಟರೇಟ್ ಪದವಿ(ಕಲೆ-17, ವಿಜ್ಞಾನ-74, ವಾಣಿಜ್ಯ-04, ಶಿಕ್ಷಣ-02), 45 ಮಂದಿಗೆ ಚಿನ್ನದ ಪದಕ ಮತ್ತು 75 ಮಂದಿಗೆ ನಗದು ಬಹುಮಾನ ಪ್ರದಾನ ಮಾಡಲಾಯಿತು. ವಿವಿಧ ಕೋರ್ಸ್‌ಗಳ ಒಟ್ಟು 242 ರ್‍ಯಾಂಕ್‌ಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದ 65 ಮಂದಿಗೆ ರ್‍ಯಾಂಕ್ ಪ್ರಮಾಣ ಪತ್ರ (ಸ್ನಾತಕೋತ್ತರ ಪದವಿ- 48 ಮತ್ತು ಪದವಿ-17, ಕಲೆ-17, ವಿಜ್ಞಾನ ಮತ್ತು ತಂತ್ರಜ್ಞಾನ-33, ವಾಣಿಜ್ಯ-10, ಶಿಕ್ಷಣ-02, ಸ್ನಾತಕೋತ್ತರ ಡಿಪ್ಲೋಮ-03) ನೀಡಲಾಯಿತು.

ಇದೇ ಸಂದರ್ಭದಲ್ಲಿ ಪ್ರೊ. ಸುಬ್ರ ಸುರೇಶ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲಾಯಿತು. ವಿವಿ ಕುಲಪತಿ ಪ್ರೊ. ಕೆ. ಬೈರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕುಲಸಚಿವ ಪ್ರೊ. ನಾಗೇಂದ್ರ ಪ್ರಕಾಶ್ ವರದಿ ವಾಚಿಸಿದರು. ಕುಲಸಚಿವ ಪ್ರೊ. ಎ. ಎಂ. ಖಾನ್ ಸಿಂಡಿಕೇಟ್ ಸದಸ್ಯರು ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಉಪಸ್ಥಿತರಿದ್ದರು.

## ಸಂಪಾದಕೀಯ

# ಅಮಾನುಷ ಕೃತ್ಯಕ್ಕೆ ಬಲಿಯಾದ ಮುಗ್ಧ ಹಸುಳೆ

ಉತ್ತರ ಪ್ರದೇಶದ ಉನ್ನಾವ್‌ನಲ್ಲಿ ಮತ್ತು ಜಮ್ಮು ಕಾಶ್ಮೀರದ ಕಠುವಾದಲ್ಲಿ ನಡೆದ ಅಪ್ರಾಪ್ತೆಯರ ಮೇಲಿನ ಎರಡು ಭೀಕರ ಅತ್ಯಾಚಾರ ಪ್ರಕರಣಗಳು ರಾಷ್ಟ್ರದ ಪ್ರಜ್ಞೆಯನ್ನು ಕಲಕಿವೆ. ಜಮ್ಮು ಕಾಶ್ಮೀರದಲ್ಲಿ ಎಂಟು ವರ್ಷದ ಅಲೆಮಾರಿ ಬಾಲಕಿಯ ಮೇಲೆ



ಐದಾರು ದಿನಗಳ ಕಾಲ ನಿರಂತರ ಗ್ಯಾಂಗ್ ರೇಪ್ ನಡೆಸಿ, ಅಮಾನುಷವಾಗಿ ಹತ್ಯೆಗೈಯಲಾಗಿದೆ. ಇನ್ನು ಉತ್ತರ ಪ್ರದೇಶದ ಘಟನೆ ಕಳೆದ ವರ್ಷವೇ ನಡೆದಿದೆ. ನೆರವು ಕೇಳಿಕೊಂಡು ಹೋಗಿದ್ದ ಅಪ್ರಾಪ್ತೆ ಮೇಲೆ ಪ್ರಭಾವಿ ಶಾಸಕ ಅತ್ಯಾಚಾರ ನಡೆಸಿದ್ದಾನೆ ಎಂಬ ಆರೋಪ. ಆದರೆ, ಆರೋಪಿ ಶಾಸಕನನ್ನು ಬಂಧಿಸುವುದಕ್ಕಿಂತ ಮೊದಲು ದೂರು ನೀಡಿದ ಯುವತಿಯ ತಂದೆಯನ್ನು ಶಸ್ತ್ರಾಸ್ತ್ರ ಕಾಯ್ದೆಯಡಿ ಪೋಲಿಸರು ಬಂಧಿಸಿದರು. ಇದನ್ನು ಖಂಡಿಸಿ ಯುವತಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳ ಮನೆಯೆದುರು ಬೆಂಕಿ ಹಚ್ಚಿಕೊಂಡಳು. ಆಗ ದೇಶದಾದ್ಯಂತ ಆಕ್ರೋಶದ ಜ್ವಾಲೆ ಹರಡಿತು. ಇನ್ನು ಕಾಶ್ಮೀರದಲ್ಲಿ ನಡೆದಂತಹ ಎಂಟು ವರ್ಷದ ಹಸುಳೆಯ ಮೇಲಿನ ಅತ್ಯಾಚಾರ ಘಟನೆ ಎಂಥಾ ಕಲ್ಲು ಮನಸ್ಸಿನ ಹೃದಯದವರನ್ನೂ ಕರಗಿಸುವಂತಿದೆ. ಇನ್ನು 2012ರಲ್ಲಿ ಹೊಸದಿಲ್ಲಿಯಲ್ಲಿ ನಡೆದ ನಿರ್ಭಯಾ ಅತ್ಯಚಾರ ಪ್ರಕರಣದ ಅಮಾನುಷತೆ ದೇಶವನ್ನು ಬೆಚ್ಚಿ ಬೀಳಿಸಿತ್ತು. ಮಹಿಳೆಯಲ್ಲಿ ಅಸುರಕ್ಷಿತ ಭಾವನೆಯನ್ನು ಬಿತ್ತಿದ, ಈ ಪ್ರಕರಣದ ಬಳಿಕ. ದೇಶವ್ಯಾಪ್ತಿ ಪ್ರತಿಭಟನೆ, ಹಕ್ಕೊತ್ತಾಯಗಳು ನಡೆದವು. ಇಷ್ಟೆಲ್ಲಾ ಆಗಿದ್ದರೂ, ಸ್ತ್ರೀಯರ, ಅದರಲ್ಲೂ ಮುಖ್ಯವಾಗಿ ಬಾಲಕಿಯರ ಸುರಕ್ಷತೆ ಎಂಬುದು ಮರೀಚಿಕೆಯಾಗಿಯೇ ಉಳಿದಿದೆ. ಇದಕ್ಕೆ ಕಠುವಾ ಪ್ರಕರಣವೇ ಸಾಕ್ಷಿ. ಕಳೆದ ವರ್ಷದಲ್ಲಿ ವಿಜಯಪುರದಲ್ಲಿ ದಾನಮ್ಮ ಎಂಬ ದಲಿತ ಬಾಲಕಿಯ ಮೇಲೆ ನಡೆದ ಅತ್ಯಚರ–ಕೊಲೆ ಪ್ರಕರಣವನ್ನು ನೆನೆಸಿಕೊಳ್ಳಬಹುದು. ಅತ್ಯಾಚಾರ ಆರೋಪಿಗಳನ್ನು ರಕ್ಷಿಸಲು ವ್ಯವಸ್ಥೆಯ ಶಕ್ತಿಗಳು, ರಾಜಕೀಯ ಹಿತಾಸಕ್ತಿಗಳು, ಅಧಿಕಾರಗಳು, ಪೋಲಿಸ್ ಹಾಗೂ ವಕೀಲರು ಮುಂತಾದಂತಹ ಬೆಳವಣಿಗೆಗಳು ಅವು, ಅತ್ಯಂತ ಕಳವಳಕಾರಿ, ವಿದ್ಯಾಮಾನ ಇದು, ನಮ್ಮ ನಾಗರಿಕ ಸಮಾಜ ಸಾಗುತ್ತಿರುವ ಅದಃಪತನಕ್ಕೆ ದಿಕ್ಸೂಚಿ. ಈ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಮುಚ್ಚಿ ಹಾಕಲು ಪೋಲಿಸರು ಹಣದ ಆಮಿಷಕ್ಕೊಳಗಾಗಿ ಭಾಗಿಯಗಿರುವುದು ನಾಚಿಕೆಗೇಡು ಮತ್ತು ಸಮಾಜದಲ್ಲಿ ಕುಸಿಯುತ್ತಿರುವ ನೈತಿಕ ಮೌಲ್ಯಗಳಿಗೂ ಇದು ಪ್ರತೀಕ. ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯುರೋ ಹೇಳುವಂತೆ, ನಮ್ಮ ದೇಶದಲ್ಲಿ ಪ್ರತಿ ದಿನ ಸರಾಸರಿ 92 ಹೆಣ್ಣು ಮಕ್ಕಳು ಅತ್ಯಾಚಾರಗೊಳಗಾಗುತ್ತಿದ್ದಾರೆ, ಇವರಲ್ಲಿ ಕೆಲವೇ ಮಂದಿಗೆ ಮಾತ್ರ ಸರಿಯಾದ ನ್ಯಾಯ ಸಿಗುತ್ತಿದೆ. ಅತ್ಯಚಾರ ಎಂಬುದು ಈ ದೇಶಕ್ಕೆ ಅಂಟಿದ ಸಾಮಾಜಿಕ ಪಿಡುಗು ಆಗಿರುವುದರಿಂದ ಈ ವಿಷಯದಲ್ಲಿ ರಾಜಕೀಯ ಮಾಡದೆ ಪ್ರಮಾಣಿಕವಾಗಿ ನಡೆದುಕೊಳ್ಳುವುದು ಎಲ್ಲಾ ರಾಜಕೀಯ ಪಕ್ಷಗಳ ಕರ್ತವ್ಯ. ನಮ್ಮ ಕಾನೂನು ವ್ಯವಸ್ಥೆ ಹಾಗೂ ನ್ಯಾಯಾಂಗವನ್ನು ಪರಿಣಾಮಕಾರಿಯಾಗಿ ಮತ್ತು ಚುರುಕಾಗಿಸದ ಹೊರತು ಈ ದುರಂತ ಮತ್ತಷ್ಟು ತೀವ್ರವಾಗುತ್ತಾ ಹೋಗುತ್ತದೆ. ಈ ಕಾರಣದಿಂದಗಿ ತಪ್ಪಿತಸ್ಥರ ವಿರುದ್ಧ ಕಠಿಣವಾದ ಕ್ರಮವನ್ನು ಕೈಗೊಂಡು, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ಮಟ್ಟಹಾಕಬೇಕು.

# ಸ್ವತಂತ್ರ ಭಾರತದಲ್ಲಿ ನಾವೆಷ್ಟು ಸ್ವತಂತ್ರರು

ಯಾರಿಗೆ ಬಂತು ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ, ಕತ್ತಲೆಯಲ್ಲಿ ಬೆತ್ತಲೆಯಾಯ್ತು ಯಾರಿಗೂ ಕಾಣದ ಸ್ವಾತಂತ್ರ್ಯ. ಒಂದು ನಿಟ್ಟಿನಲ್ಲಿ ಹೇಳುವುದಾದರೆ ನಾವಿಂದು ಎಲ್ಲಾ ರೀತಿಯಲ್ಲೂ ಸ್ವತಂತ್ರರು, ಸ್ವಾತಂತ್ರ್ಯದ ನಂತರ ಸಂವಿಧಾನದ ಮೂಲಕ ನಮಗೆ 6 ಮೂಲಭೂತ ಹಕ್ಕುಗಳ ಜೊತೆಗೆ ಆರ್ಟಿಕಲ್ 19 ರ ಪ್ರಕಾರ ವಾಕ್‌ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ದೇಶದಾದ್ಯಂತ ಸಂಚರಿಸುವ ಸ್ವಾತಂತ್ರ್ಯ ಹೀಗೆ 6 ಸ್ವಾತಂತ್ರ್ಯದ ಜೊತೆಗೆ ಪ್ರತಿಯೊಬ್ಬ ನಾಗರಿಕನು ತಾನು ಇಚ್ಛಿಸಿದ ಪ್ರದೇಶದಲ್ಲಿ ಬದುಕುವ, ಉದ್ಯೋಗ ಪಡೆಯುವ ಸ್ವಾತಂತ್ರ್ಯದೊಂದಿಗೆ ಶೋಷಣೆಯ ವಿರುದ್ಧ ಹೋರಾಡುವ ಸ್ವಾತಂತ್ರ್ಯ ಕೂಡ ಇದೆ. ಆದರೆ ಈ ಎಲ್ಲಾ ಸ್ವಾತಂತ್ರ್ಯಗಳಿದ್ದರೂ ಕೂಡ ಎಲ್ಲೋ ಒಂದು ಕಡೆ ನಾವು ದಾಸ್ಯದ ಬದುಕನ್ನ ಬದುಕುತ್ತಾ ಇದ್ದೇವೆ. ದಿನ ಬೆಳಗಾದರೆ ದೂರದರ್ಶನದಲ್ಲಿ ಪತ್ರಿಕೆಗಳಲ್ಲಿ ಪ್ರಸಾರವಾಗುವ ಕೊಲೆ, ಸುಲಿಗೆ,ದರೋಡೆ, ಅಪಹರಣ ಅತ್ಯಾಚಾರ, ಭ್ರಷ್ಟಾಚಾರ ಇವೆಲ್ಲಾ 90 ವರ್ಷದ ಅವಿರತ ಹೋರಾಟದ ಫಲವಾಗಿ ಸ್ವಾತಂತ್ರ್ಯ ಪಡೆದರೂ ಕೂಡ ನಾವಿನ್ನೂ ದಾಸ್ಯದ ಸಂಕೋಲೆಯೊಳಗೆ ಬಂಧಿಯಾಗಿದ್ದೇವೆ ಎಂಬುವುದರ ಸಂಕೇತವಾಗಿ ನಮ್ಮ ಮುಂದೆ ನಿಲ್ಲುತ್ತದೆ.

ನಮ್ಮ ದೇಶದ ರಾಜಕೀಯ ವಿದ್ಯಾಮಾನಗಳತ್ತ ಕಣ್ಣು ಹಾಯಿಸಿದರೆ ಇಂದು ಕುರ್ಚಿಗಾಗಿ ಹೋರಾಟ, ಕುರ್ಚಿಯನ್ನೇ ತಲೆಯಲ್ಲಿ ಹೊತ್ತು ತಿರುಗುವ ಪರಿಪಾಠ. ಇಂದು ನಮ್ಮನ್ನಾಳುವ ಸರ್ಕಾರಗಳಂತೂ ನಮ್ಮನ್ನು ಶತಮಾನಗಳಷ್ಟು ಹಿಂದಿನ ಜಮೀನ್ದಾರಿ ಪಾಳೇಯಗಾರಿಕೆ ಕಾಲಕ್ಕೆ ಎಳೆದೊಯ್ಯುತ್ತಿವೆ. ಒಂದು ಕಡೆ ರೈತರು ಸಾಲಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ನಮ್ಮ ಸಚಿವ ಮಹಾಶಯರು ತಮ್ಮ ವಸತಿ ಗೃಹಗಳ ರಿಪೇರಿಗೆ ಕೋಟಿ ಕೋಟಿ ಹಣ ಖರ್ಚು ಮಾಡುತ್ತಿದ್ದಾರೆ. ಪ್ರಭಾವೀ ನಾಯಕರ ವಿಲಾಸಿ ಜೀವನಕ್ಕೆ ನಮ್ಮ ತೆರಿಗೆ ಹಣ ಬಲಿಯಾಗುತಿದೆ. ಒಬ್ಬ ನಿಷ್ಠಾವಂತ ನಾಯಕನನ್ನು ಆರಿಸಲಾರದಷ್ಟು ಅಸಮರ್ಥರಾಗುವ ಮಟ್ಟಿಗೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಅಧಃಪತನದಿಂದ ಅವನತಿಯತ್ತ ಸಾಗಿದೆ.

ಇನ್ನು ಭ್ರಷ್ಟಾಚಾರ,ಇಂದು ಎಲ್ಲಿ ನೋಡಿದರಲ್ಲಿ ಭ್ರಷ್ಟಾಚಾರ, ಪಂಚಾಯತ್‌ನಿಂದ ಪಾರ್ಲಿಮೆಂಟ್‌ನವರೆಗೆ ಹಳ್ಳಿಯಿಂದ ದಿಲ್ಲಿಯವರೆಗೆ, ಸಾಮಾನ್ಯನಿಂದ ನ್ಯಾಯಾಧೀಶರವರೆಗೆ ಎಲ್ಲ ಕಡೆ ಭ್ರಷ್ಟಾಚಾರ. ಭ್ರಷ್ಟಾಚಾರವನ್ನು ತಡೆಗಟ್ಟಬೇಕೆಂಬ ಸದುದ್ದೇಶದಿಂದ ಸ್ಥಾಪಿತವಾದ ಲೋಕಾಯಕ್ತದೊಳಗೇ ಭ್ರಷ್ಟಾಚಾರ ನಡೆಯುತ್ತದೆ ಎಂದಾದರೆ ಜನಸಾಮಾನ್ಯರು ಇನ್ಯಾವ ಸಂಸ್ಥೆಯ ಮೇಲೆ ನಂಬಿಕೆ ಇಡಬೇಕು.ಹೀಗೆ ರಕ್ಷಕರೇ ಭಕ್ಷಕರಾದರೆ ದೇಶದ ಚೇತನ ಉಳಿಯುವುದೆಂತು?

ಇನ್ನು ಮಹಿಳಾ ಸ್ವಾತಂತ್ರ್ಯದ ಅತಂತ್ರತೆಯ ಬಗ್ಗೆ ಕೇಳಲೇಬೇಡಿ. ಸಂತೆ ಮಾರ್ಕೆಟ್ ಬಸ್‌ಸ್ಟ್ಯಾಂಡ್, ಶಾಲಾಕಾಲೇಜು ,ಕ್ಯಾಂಪಸ್ ಎಲ್ಲಿ ಸುರಕ್ಷಿತ ಇಂದು ನನ್ನ ಹೆಣ್ಮಗಳು, ಈ ಪ್ರಶ್ನೆ ಹೆತ್ತು ಹೊತ್ತ ಹೃದಯಗಳನ್ನು ಮತ್ತೆ ಮತ್ತೆ ಸುರುಳಿಯಾಗಿ ಕಾಡುತ್ತಿವೆ. ತಮ್ಮ ಮಗಳು ವಿದ್ಯಾವಂತಳಾಗಲಿ ಎಂಬ ಆಸೆ ಹೊತ್ತ ಮನಸ್ಸುಗಳ ಆಸೆಯ ಕನಸುಗಳು ಬತ್ತಿಹೋಗಿ ಅಲ್ಲಿ ಆಕ್ರಂದನದ ಹೊಗೆ ಮೇಲೆಳುತ್ತಿದೆ. ಇದಕ್ಕೆ ಕಾರಣ ದೇಶದಾದ್ಯಂತ ನಡೆಯುತ್ತಿರುವ ಜನಮಾನಸವನ್ನು ಬೆಚ್ಚಿಬೀಳಿಸುವ ಭೀಕರ ಅತ್ಯಾಚಾರ ಪ್ರಕರಣಗಳು. ರಾತ್ರಿ 12 ಗಂಟೆಯ ಹೊತ್ತಿಗೆ ಒಬ್ಬ ಮಹಿಳೆ ಒಂಟಿಯಾಗಿ ಓಡಾಡುವ ಸುಭಿಕ್ಷ ದೇಶ ಭಾರತ ಆಗಬೇಕೆಂಬುದು ಗಾಂಧೀಜಿಯವರ ಕನಸು.ಇಂದು ರಾತ್ರಿ 12 ಗಂಟೆ ಬಿಡಿ! ಹಗಲಿನ 12 ಗಂಟೆಯ ಸಮಯದಲ್ಲಿಯೂ ಒಂಟಿಯಾಗಿ ಓಡಾಡುವ ಸಾಧ್ಯತೆ ಇದ್ದಂತಿಲ್ಲ.

ಇನ್ನು ನ್ಯಾಯಾಂಗ ವ್ಯವಸ್ಥೆಯ ಅಧಃಪತನ, ಕಾನೂನಿನ ಎದುರು ಎಲ್ಲರೂ ಸಮಾನರು ಎಂದು ಸಂವಿಧಾನ ಹೇಳುತ್ತಿದ್ದರೂ ಬಡವ ಶ್ರೀಮಂತರ ನಡುವಿನ ನ್ಯಾಯಾಂಗದ ಅಳತೆಕೋಲುಗಳು ಕೆಸರಲ್ಲಿ ಹೂತ ಕಂಬಂದಂತಾಗುತ್ತಿವೆ.ಬಡವರ ಮನೆಯ ನಾಯಿಮರಿ ಕೊಳಗೇರಿಯಲ್ಲಿ ಆಟೋ ಚಕ್ರಕ್ಕೆ ಸಿಕ್ಕು ಸತ್ತರೆ ಪೀಡೆ ತೊಲಗಿತು ಎಂದು ಸುಮ್ಮನಾಗುತ್ತಾರೆ ಜನ. ಅದೇ ಶ್ರೀಮಂತರ ಮನೆಯ ಪಾಮೋರಿಯನ್ ಸತ್ತರೆ ದೊಡ್ಡ ರಂಪಾಟವಾಗಿ ಬಿಡುತ್ತೆ. ಇದೇ ತಾರತಮ್ಯ ನಮ್ಮ ಬಡವ–ಶ್ರೀಮಂತರ ನಡುವಿನ ನ್ಯಾಯಾಂಗ ವ್ಯವಸ್ಥೆಯಲ್ಲೂ ಕಂಡುಬರುತ್ತಿದೆ. ಇಂದು ಭ್ರಷ್ಟಾಚಾರ ಅಪರಾಧದಡಿ ಶಿಕ್ಷೆ ಆದರೂ ಕೂಡ ಖುಲಾಸೆಗೊಂಡಿರುವ ಕೆಲವು ರಾಜಕಾರಣಿಗಳು, ಸಿನಿಮ ನಟರುಗಳು, ಸೆಲೆಬ್ರೆಟಿಗಳು ಎಲ್ಲೋ ಒಂದು ಕಡೆ ಹಣ ಕೊಟ್ಟು ಕಾನೂನನ್ನು ಕೊಂಡುಕೊಂಡಿರಬಹುದು ಅಂತ ಅನಿಸಲ್ವಾ? ಹಾಗೆಂದ ಮಾತ್ರಕ್ಕೆ ಇಡೀ ನ್ಯಾಯಾಂಗ ವ್ಯವಸ್ಥೆಯೇ ವಿಫಲವಾಗಿದೆ ಎಂದರ್ಥವಲ್ಲ. ಯಾಕೂಬ್‌ಗೆ ಗಲ್ಲು ಶಿಕ್ಷೆ ನೀಡಿದ್ದು ನಮ್ಮ ನ್ಯಾಯಾಂಗ ವ್ಯವಸ್ಥೆಯ ಸಾಫಲ್ಯಗಳಲ್ಲಿ ಒಂದು.

ಸ್ವಾತಂತ್ರ್ಯಾನಂತರ ಭದ್ರತಾ ವ್ಯವಸ್ಥೆಯ ನಡುವೆಯೂ ಭಯೋತ್ಪಾದನಾ ಚಟುವಟಿಕೆಗಳು ರಾಜಾರೋಷವಾಗಿ ನಡೆಯುತ್ತಾ ಜನಮಾನಸವನ್ನು ತಲ್ಲಣಗೊಳಿಸಿವೆ. ಖಾಸಗಿ ಸಂಸ್ಥೆಗಳು ವ್ಯವಸ್ಥಿತ ರೀತಿಯಲ್ಲಿ ಭದ್ರತಾ ವ್ಯವಸ್ಥೆಯನ್ನು ಹೊಂದಿದ್ದರೂ ಮುಂಬೈನಲ್ಲಿ ನಡೆದ ವಿದ್ಯಮಾನ ಭದ್ರತಾ ವ್ಯವಸ್ಥೆಯ ನ್ಯೂನತೆಯನ್ನು ಎತ್ತಿ ತೊರಿಸುತ್ತದೆ. ಅಂತಹ ಸ್ಟಾರ್ ಹೋಟೇಲುಗಳಲ್ಲಿಯೇ ಭದ್ರತಾ ವ್ಯವಸ್ಥೆ ಇದ್ದೂ ಇಲ್ಲವಾಗಿದೆ. ಹಾಗಾದರೆ ಸಾರ್ವಜನಿಕ ಸ್ಥಳಗಳಾದ ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಮಾರುಕಟ್ಟೆ, ಪಾರ್ಕ್‌ಗಳಲ್ಲಿ ಭದ್ರತಾ ವ್ಯವಸ್ಥೆ ಇಲ್ಲದಿರುವಾಗ ಒಬ್ಬ ಸಾಮಾನ್ಯ ನಾಗರಿಕ ಹೇಗೆ ವ್ಯವಹರಿಸಬೇಕು? ಜೀವದ ಹಂಗು ತೊರೆದು ಓಡಾಡಬೇಕೇ?. ಜೀವಕ್ಕೆ ಬಡವ–ಶ್ರೀಮಂತ ಎಂಬ ತರತಮ್ಯವಿದೆಯೇ? ಮುಗ್ಧ ಜನರ ಜೀವಕ್ಕೆ ಬೆಲೆಯಿಲ್ಲವೇ? ಹಾಗಾದರೆ ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಈ ದುರಂತಗಳಿಗೆ ಯಾರು ಹೊಣೆ?

ಇನ್ನು ಪತ್ರಿಕಾ ಸ್ವಾತಂತ್ರದ ಬಗ್ಗೆ ಮಾತನಾಡೋದಾದ್ರೆ ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ ವಿಪುಲವಾಗಿದೆ. ಆದರೆ ಪತ್ರಿಕಾಮಾಧ್ಯಮಗಳು ಮಾತ್ರ ತಮ್ಮ ತಮ್ಮೊಳಗೆ ಪೈಪೋಟಿಗೆ ಬಿದ್ದು ಯಾವ ವಿಚಾರವನ್ನು ಅಗತ್ಯವಾಗಿ ಒತ್ತುಕೊಟ್ಟು ಹೇಳಬೇಕೋ ಅದನ್ನು ಬಿಟ್ಟು ಉಳಿದೆಲ್ಲವನ್ನು ಬಿತ್ತರಿಸುತ್ತವೆ.

ಇನ್ನು ನಮ್ಮದು ಹೇಳಿಕೊಳ್ಳಲಿಕ್ಕೆ ಜಾತ್ಯತೀತ ರಾಷ್ಟ್ರ ಭಾರತ. ಇಲ್ಲಿ ಚುನವಣಾ ಓಟ್ ಬ್ಯಾಂಕ್‌ಗಾಗಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರೆನ್ನುವ ದೊಡ್ಡ ಕಂದಕವೇ ನಿರ್ಮಾಣವಾಗಿದೆ. ಇನ್ನೂ ಹೇಳತ್ತಾ ಹೋದರೆ ಇದು ಮುಗಿಯದ ಲೇಖನವಾಗಿ ಮಾರ್ಪಾಟಾಗಬಹುದು.

ಇಂತಹ ಸಂದಿಗ್ಧ ಸಂಕಟದ ಸನ್ನಿವೇಶದಿಂದ ನಾವು ಪಾರಾಗಬೇಕಾದರೆ ಅದಕ್ಕೆ ಏನು ಮಡುವುದು ಎಂದು ಚಿಂತನೆ ಮಾಡುವಾಗ ಹೊಳೆಯುವ ಸಮರ್ಪಕ ಉತ್ತರ ಒಂದೇ. ನಮ್ಮ ಭವ್ಯ ಸಮಾಜದ ಭಾವಿ ಸತ್ಪ್ರಜೆಗಳೆಂದೇ ಬಿಂಬಿಸಲ್ಪಡುವ ಈಗಿನ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ, ಹಕ್ಕುಗಳು ಮತ್ತು ರಾಜಕೀಯ ಮೌಲ್ಯಗಳ ಅರಿವು ಮೂಡಿಸುವುದು ಅಗತ್ಯ.

**–ರಾಧಿಕಾ**

## ಸಂಪಾದಕರಿಗೆ ಪತ್ರ

# ವಿ.ವಿಯಲ್ಲಿ ಹಸಿರೀಕರಣ ಧ್ಯೇಯವಾಗಲಿ

ಮಂಗಳೂರು ನಗರದ ಬಳಿಯೇ ಮಂಗಳೂರು ವಿಶ್ವವಿದ್ಯಾನಿಲಯ ಇರುವುದು ನಮಗೆ ವರವೂ, ಶಾಪವೂ ಅನಿಸುವಂತಾಗಿದೆ. ನಿರೀಕ್ಷಿಸಿದಂತೆ ಈ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳು ತುಂಬಾ ಬಿಸಿಯ ವಾತಾವರಣವನ್ನು ತಂದೊಡ್ಡಿದೆ. ಸರಾಸರಿ ಒಂದು ಡಿಗ್ರಿ ಸೆಲ್ಸಿಯಸ್ ತಾಪಮಾನ ಹೆಚ್ಚಾಗುವುದು ಸಾಮಾನ್ಯ. ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಈ ವಿದ್ಯಾಮಾನ ಕಂಡುಬಂದಿದೆಯಾದರೂ ಮಂಗಳೂರು ನಗರದಲ್ಲಿ ಮಾತ್ರ ಒಮ್ಮೆಗೆ ನಾಲ್ಕು ಡಿಗ್ರಿ ಸೆಲ್ಸಿಯಸ್ ತಾಪಮಾನ ಏರಿಕೆ ದಾಖಲಾಗಿದ್ದು ನಗರೀಕರಣದ ನಮ್ಮ ವಿಧಾನಗಳನ್ನು ಮರುಪರಿಶೀಲಿಸುವಂತೆ ಒತ್ತಾಯಿಸುತ್ತಿದೆ. ವ್ಯಾಪಕವಾಗಿ ಕಾಂಕ್ರೀಟೀಕರಣ ಮತ್ತು ಮರಗಳ ಕಡಿತವನ್ನು ನಮ್ಮ ಗುರಿಯಂತೆ ಮಾಡಿಕೊಂಡು ಬಂದ ನಾವು ಇನ್ನು ಪ್ರಕೃತಿಗೆ ಉತ್ತರಿಸಬೇಕು, ಹಸಿರು ಕ್ಯಾಂಪಸ್‌ಗಾಗಿ ಅಭಿನಂದನೆ ಪಡೆದುಕೊಳ್ಳುತ್ತಿರುವ ನಮ್ಮ ಮಂಗಳೂರು ವಿ.ವಿಯಲ್ಲೂ ಮಂಗಳೂರಿನ ಕಾಂಕ್ರಿಟಿಕರಣದ ಬಿಸಿ ಕಂಡುಬರುತ್ತಿದೆ. ಇಲ್ಲಿಯ ಹಸಿರು ತಂಪಿನ ವಾತಾವರಣವೇನನ್ನು ನಿರ್ಮಿಸುತ್ತಿಲ್ಲ. ಹಾಗಾಗಿ ಕಾಂಕ್ರೀಟೀಕರಣವನ್ನು ಆದಷ್ಟು ಕಡೆಗಣಿಸಿ ಹಸಿರೀಕರಣದತ್ತ ಮುಂದಡಿ ಇಡಬೇಕು. ಇದು ಮಂಗಳೂರು ವಿ.ವಿಯ ಸಾಮಾಜಿಕ ಬಾಧ್ಯತೆಯೂ ಹೌದು

**–ಸಂದೀಪ್ ಕೆ**

# ಚುನಾವಣಾ ದಿನ ರಜಾದಿನವಲ್ಲ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ನಮ್ಮೆಲ್ಲರ ಮುಖ್ಯವಾದ ಹಕ್ಕು ಮತ್ತು ಕರ್ತವ್ಯವಾಗಿದೆ, ಚುನಾವಣೆಯನ್ನು ಪ್ರಜಾತಂತ್ರದ ಹಬ್ಬವೆಂದು ಪರಿಗಣಿಸಿದರೆ ಆ ಹಬ್ಬದಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಬಹುಪಾಲು ಕಡಿಮೆ ಎಂದು ಹೇಳಬಹುದು. ಇಂದು ಚುನಾವಣಾದಿನವು ನಮ್ಮೆಲ್ಲರ ಪಾಲಿಗೆ ಸರ್ಕಾರಿ ರಜಾದಿನವಾಗಿ ಪರಿಣಮಿಸಿದೆ.

ನಮ್ಮ ದೇಶವನ್ನು ಸದೃಡಗೊಳಿಸಲು ಬೇಕಾದ ಅಭ್ಯರ್ಥಿಯನ್ನು ಆಯ್ಕೆಮಾಡುವ ಅದೃಷ್ಟದ ದಿನವನ್ನು ಹೇಗೆ ತಾನೆ ರಜಾದಿನ ಎಂದು ಪರಿಗಣಿಸಲು ಸಾಧ್ಯ.....! ನಮ್ಮ ಜನರಲ್ಲಿರುವ ಸಾಮಾನ್ಯ ಮನಸ್ಥಿತಿಯಾದ ನನ್ನದೊಂದು ಮತದಾನದಿಂದ ಏನು ಮಹಾಬದಲಾಗುತ್ತದೆ ಎಂಬ ಉತ್ಪ್ರೇಕ್ಷೆ ಬೇಡ, ಯಾರಿಗೆ ಗೊತ್ತು...? ಒಂದು ಮತ ಇಡೀ ಸಮಾಜದ ಸ್ಥಿತಿಯನ್ನು ಬದಲಾವಣೆ ಮಾಡಲೂಬಹುದು ಅಭ್ಯರ್ಥಿಯ ಆಯ್ಕೆಯಲ್ಲಿ ನಮ್ಮೆಲ್ಲರಿಗೂ ಸ್ವತಂತ್ರ್ಯ ಚಿಂತನೆಗೆ ಅವಕಾಶವಿದೆ. ಅದು ಸಂವಿಧಾನದ ಆಶಯವು ಹೌದು. ಭಾಗವಹಿಸಿದ ಅಭ್ಯರ್ಥಿಗಳು ಯಾರೂ ನನ್ನ ಆಯ್ಕೆಗೆ ಅರ್ಹರಿಲ್ಲ ಎನಿಸಿದರೆ ನೋಟಾ ನಮಗೆ ಇರುವ ಒಂದು ಮಾರ್ಗ.

ಜಾತಿ,ಧರ್ಮ,ಜಲ,ಮಣ್ಣು ನಮ್ಮಲ್ಲಿ ಇಂದು ಬಹಳ ಚರ್ಚೆಗೆ ಒಳಗಾಗುವ ವಿಷಯ. ಅದನ್ನು ಆದರವಾಗಿಟ್ಟು ಕೊಂಡು, ರಾಜಕೀಯ ಪಕ್ಷಗಳು ಪ್ರಚಾರಕ್ಕೆ ಬಳಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನವನ್ನು ನಡೆಸುತ್ತಿವೆ. ಧರ್ಮವನ್ನು ಆದರವಾಗಿಟ್ಟು ಅಥವಾ ಯಾವುದೇ ಆಮಿಷಕ್ಕೆ ಒಳಗಾಗಿ ಮತನೀಡುವವರು ಮುಂದಿನ ದಿನಗಳಲ್ಲಿ ಸವಾಲುಗಳನ್ನು ಎದುರಿಸಲು ಸಿದ್ಧರಾಗಲೇ ಬೇಕು.

ಏನೇ ಆದರೂ ವೋಟ್ ಮಾಡದೇ ಬೇರೆ–ಬೇರೆ ಸ್ಥಳಕ್ಕೆ ಪ್ರವಾಸಕ್ಕಾಗಿ ಹೋಗುವುದು ಅಥವಾ ಮತಬಹಿಷ್ಕಾರ ಮಾಡುವುದು ತಪ್ಪು, ಒಂದು ಚುನಾವಣಾ ಕೆಲಸ ಕಾರ್ಯಕ್ಕಾಗಿ ಅರ್ಧದಷ್ಟೋ ಇತರ ಸರ್ಕಾರಿ ಕೆಲಸದ ಸಮಯವನ್ನು ಮೀಸಲಿಡಲಾಗುವುದು. ಅವೆಲ್ಲವನ್ನು ವ್ಯರ್ಥಮಾಡದೇ ನಾವು ನಮಗೆ ನೀಡಿರುವ ಹಕ್ಕನ್ನು ಬಳಸಿಕೊಳ್ಳಬೇಕು. ಯಾವುದೇ ಆಮಿಷಕ್ಕೂ ಒಳಗಾಗದೇ ನಿಷ್ಪಕ್ಷಪಾತದಿಂದ ಮಾಡುವ ಮತವು ಒಳ್ಳೆಯ ಭವಿಷ್ಯಕ್ಕೆ ಹಿಡಿದ ಕೈಗನ್ನಡಿ ಎನ್ನಬಹುದು.ಮತ ಎನ್ನುವುದು ದಾನವಾಗಬೇಕು.

**–ರಾಧಿಕಾ**

# ಮೆಚ್ಚುಗೆಯೊಂದಿಗೆ ಹುಚ್ಚಾಯಿತೇ ಸೆಲ್ಫಿ ?

ಕಾಲುಜಾರಿ ಕೆಳಕ್ಕೆ ಬಿದ್ದರೆ ನಗುವ ಜನರೇ ಹೆಚ್ಚು. ಇಂದು ನಗು ಒಂದು ಸಾಧನವಾಗಿದೆ. ಮನಸ್ಸಿನಿಂದ ನಗದೆ ಕೃತಕವಾಗಿ ನಗುವವರ ಹೆಚ್ಚು. ಆದರೆ ಪ್ರಸ್ತುತ ಕಾಲದಲ್ಲಿ ಮೊಬೈಲ್ ಹಿಡಿದು ಒಬ್ಬೊಬ್ಬರೆ ನಗುವವರ ಸಂಖ್ಯೆ ಅಧಿಕವಾಗಿದೆ ಎಂದರೆ ತಪ್ಪಾಗಲಾರದು. ತಮ್ಮ ಮುಖವನ್ನು ತಾವೇ ನೋಡಿ ವಿವಿಧ ಭಂಗಿಯಲ್ಲಿ ಫೋಸ್ ಕೊಟ್ಟು ಅದನ್ನು ವಾಟ್ಸ್‌ಅಪ್, ಫೇಸ್ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ಹೆಚ್ಚಿನ ಜನರ ಮೆಚ್ಚುಗೆ(ಲೈಕ್) ಸಂಪಾದಿಸುವುದು ನಮ್ಮ ಪರಮಗುರಿಯಾಗಿದೆ.

ಇಂದು ಸೆಲ್ಫಿ ಎನ್ನುವುದನ್ನು ನಿರ್ದಿಷ್ಟ ಸ್ಥಳದಲ್ಲಿ ಕಾಣಲು ಸಿಗುವುದು ಎಂದು ಹೇಳಲು ಸಾಧ್ಯವಿಲ್ಲ. ಅದನ್ನು ಎಲ್ಲೆಂದರೆ ಅಲ್ಲಿ ತೆಗಿಸಿಕೊಳ್ಳುವ ಒಂದು ಗೀಳು ಹುಟ್ಟಿಕೊಂಡಿದೆ. ಎತ್ತರದ ಜಾಗ, ಗದ್ದೆ, ಬಯಲು, ಪೇಟೆ, ನದಿ, ರಸ್ತೆ, ರೈಲು, ಅಪಾಯಕಾರಿ ಪ್ರಾಣಿಗಳೊಂದಿಗೆ ಕರೆಂಟು ಕಂಬ, ಫೋನ್‌ಟವರ್ ಮೇಲೆ ನಿಂತು ಅಪಾಯಕಾರಿಯೆಂದು ಕಂಡುಬಂದ ಜಾಗವನ್ನು ಬಿಟ್ಟಿಲ್ಲ. ಸೆಲ್ಫಿ ಇಂದು ಎಷ್ಟು ಹಾಸ್ಯವನ್ನು ಸೃಷ್ಟಿಸಿದೆ ಎಂದರೆ ಅದನ್ನು ತೆಗೆಯಲು ಹೊರಟ ನಗರದ ಮಹಿಳೆಯೊಬ್ಬಳು ಹಳ್ಳಿಯ ಬಯಲಿನಲ್ಲಿ ಶೌಚಾಲಯಕ್ಕೆ ಹೊರಟವರನ್ನು ಕೂಡಾ ಗಮನಿಸದೆ ಅಲ್ಲಿ ಫೋಟೋ ತೆಗಿಸಿಕೊಂಡು



ಅದನ್ನು ಅಂತರ್ಜಾಲಕ್ಕೆ ಹರಿದುಬಿಟ್ಟು ಸಾಕಷ್ಟು ಟೀಕೆಗಳಾಗಿದೆ. ಇಂದು ಸಣ್ಣ-ಪುಟ್ಟ ಸಾಧನೆಯೂ ಭಾರಿ ಪ್ರಚಾರ ಪಡೆಯುತ್ತಿದೆ. ಬೀದಿಯ ಅಂಗಡಿಯಲ್ಲಿ ಒಂದು ಚಿಕ್ಕ ಐಸ್‌ಕ್ರೀಮ್ ತೆಗೆದುಕೊಂಡರೂ ಅದಕ್ಕೂ ಒಂದು ಸೆಲ್ಫಿ, ಐಸ್‌ಕ್ರೀಮ್ ನೀರಾದರು ಸೆಲ್ಫಿಮಾತ್ರ ಕರಗದೆ ಹಾಗೆ ಉಳಿದಿದೆ.

ಮೊಬೈಲ್ ಬಂದ ಹೊಸದರಲ್ಲಿ ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡು ಒಬ್ಬೊಬ್ಬರೆ ಮಾತಾನಾಡುತ್ತಿದ್ದ ಜನರು ಫ್ರಂಟ್ ಕ್ಯಾಮರಾ ಬಂದ ಮೇಲೆ ಒಬ್ಬರೇ ನಗುವುದರೊಂದಿಗೆ ತಮ್ಮದೆ ಆದ ಲೋಕದಲ್ಲಿ ನಿರತರಾಗಿರುತ್ತಾರೆ. ಅವರನ್ನು ನೋಡಿ ಹುಚ್ಚರೆಂದು ಮೊದಲು ಅನಿಸಿದರೂ, ಊರೂರು ಅಲೆದು ನಾ ಹೋದದ್ದು ಅದೇ ದಾರಿಯಲ್ಲಿ ಎಂಬಂತೆ ಎಲ್ಲರೂ ಸೆಲ್ಫಿ ಎಂಬ ದೇವರ ದಾಸರಾಗಿದ್ದಾರೆ. ಇದ-ರಿಂದಾಗಿ ಸ್ನೇಹಿತರು, ಕುಟುಂಬದ ಸದಸ್ಯರೊಂದಿಗೆ ಯಾವುದೇ ವಿಶೇಷ ಸ್ಥಳಗಳಿಗೆ ಭೇಟಿ ನೀಡಿದರೂ ಸ್ಥಳದ ಸೌಂದರ್ಯವನ್ನು ಅನುಭವಿಸದೆ, ಸೆಲ್ಫಿಯ ಗುಂಗಿಗೆ ಮರುಳಾಗಿದ್ದಾರೆ. ಈ ಎಲ್ಲಾ ಅಂಶವನ್ನು ಗಮನಿಸುತ್ತ ಹೊರಟರೆ ಮಾನವನ ಸಹಜ ಬದುಕಿನಲ್ಲಿ ಸೆಲ್ಫಿ ಒಂದು ಬಿರುಗಾಳಿಯನ್ನು ಎಬ್ಬಿಸಿದೆ.

ಹಿಂದೆ ಕವಿ, ಕಲಾವಿದರು, ಚಿತ್ರನಟರು ಎದುರು ಸಿಕ್ಕರೆ ಸರ್ ಒಂದು ಆಟೋಗ್ರಾಫ್ ಪ್ಲೀಸ್ ಎಂಬ ಕಾಲವಿತ್ತು, ಆದರೆ ಇಂದು ಸರ್ ಒಂದು ಸೆಲ್ಫಿ ಪ್ಲೀಸ್ ಎಂಬ ಕಾಲಬಂದಿದೆ. ಇಂದು ಎಲ್ಲೆಂದರೆ ಅಲ್ಲಿ ನಗುವುದು ಅಳುವುದು ಸಿಟ್ಟುಬಂದಂತೆ ಮುಖಮಾಡುವುದು, ಹೀಗೆ ವಿವಿಧ ರೀತಿಯಲ್ಲಿ ಹುಚ್ಚರಾಗಿ ಬಿಟ್ಟಿದ್ದೇವೆ. ಇದಕ್ಕೆ ಯಾವ ವಯಸ್ಸಿನ ಮಿತಿಯಿಲ್ಲ. ತಿಂಗಳ ಮಗುವಿನಿಂದ ಹಿಡಿದು ಇವತ್ತೊ ನಾಳೆಯೋ ಸಾಯುವ ವೃದ್ಧರು ಇದರ ದಾಸರಾಗಿದ್ದಾರೆ.

2014 ರ ವರ್ಷವನ್ನು ಫ್ಯಾಷನ್ನಿನ ವರ್ಷ ಎಂದು ಯುನೈಟೆಡ್ ಸ್ಟೇಟ್ಸ್‌ಡಿಪಾರ್ಟ್ಮೆಂಟ್ ಆಫ್ ಟ್ರಾನ್ಸ್ಪೋರ್ಟೇಷನ್ ಸಂಸ್ಥೆ ಕರೆದಿದೆ. ಜನರು ವಿವಿಧ ಶೈಲಿಯಲ್ಲಿ ಸೆಲ್ಫಿ ತೆಗೆದುಕೊಂಡು ಅದು ಅತೀ ಹೆಚ್ಚು ಜನಪ್ರಿಯವಾದ ವರ್ಷವಾಗಿದೆ.

ಸೆಲ್ಫಿಯ ಕುರಿತು ಗ್ರೀಕ್ ಪುರಾಣದಲ್ಲಿ ಉಲ್ಲೇಖವನ್ನು ಕಾಣಬಹುದು. ನಾರ್ಸಿಸಸ್ ಎನ್ನುವ ವ್ಯಕ್ತಿ ಸುಂದರನಾಗಿದ್ದು ಜಂಭವನ್ನು ಹೊಂದಿದ್ದನು. ಆತನು ಒಂದು ದಿನ ಕೊಳದಲ್ಲಿ ಇಣುಕಿ ಪ್ರತಿಬಿಂಬ ನೋಡಿದನು. ಅದು ಹವ್ಯಾಸವಾಗಿ ಬೆಳೆದು ಕೊನೆಗೊಂದು ದಿನ ಆಯತಪ್ಪಿ ಅಲ್ಲೇ ಬಿದ್ದು ಸತ್ತನು. ನಮ್ಮಲ್ಲಿ ಇಂತಹ ಹಲವು ವೃತ್ತಾಂತಗಳಿವೆ. ಮನುಷ್ಯತ್ವವನ್ನು ಪ್ರಶ್ನಿಸುವ ಬದುಕು ನಮ್ಮದಾಗಿದೆ. ಇಷ್ಟೆಲ್ಲಾ ಆದರೂ ಸೆಲ್ಫಿ ಹುಚ್ಚು ಇನ್ನು ಬಿಡಲಿಲ್ಲ. ಅದು ಮನೋರಂಜನೆಯ ಹುಚ್ಚೋ ಅಥ-ವಾ ನಮ್ಮನ್ನು ನಾವು ಅತಿಯಾಗಿ ಮೋಹಿಸುವುದೋ ತಿಳಿಯದು. ಇದೊಂದು ಮನೋರೋಗದ ರೀತಿಯಲ್ಲಿದೆ. ಈ ಎಲ್ಲಾ ಅಂಶವನ್ನು ನೋಡಿದಾಗ ಮನಸ್ಸಿನ ಆಳದಲ್ಲಿ ಮೂಡುವ ಸಂಶಯವೆಂದರೆ ಮೆಚ್ಚುಗೆಯನ್ನು ಗಳಿಸಲು ಹೋದ ಸೆಲ್ಫಿ ನಮ್ಮನ್ನು ಹುಚ್ಚಾಗಿಸಿತೇ ಎಂದು?

-ರಾಧಿಕಾ

# ಕಣ್ಮರೆಯಾಗುತ್ತಿರುವ ಕಡೆಗೋಲು



ಶತಮಾನ ಕಳೆದ ಹಾಗೆ ಕೃಷಿ ಪ್ರಧಾನವಾದ ಜಾನಪದ ಸಂಸ್ಕೃತಿ ಜಾಗತೀಕರಣದ ಹರಿತ ಬಾಯಿಗೆ ಸಿಕ್ಕು ನಲುಗುತ್ತಿದೆ. ಒಂದು ಕಾಲಕ್ಕೆ ಹೈನುಗಾರಿಕೆ ಪ್ರಧಾನವಾಗಿದ್ದ ಮನೆಗಳಲ್ಲಿ ಕಾಣಸಿಗುತ್ತಿದ್ದ ಅನೇಕ ಸಂಸ್ಕೃತಿ ಬಿಂಬಿಸುವ ಉಪಕರಣಗಳು ಮನೆ ಮನದಿಂದ ಮರೆಯಾಗುತ್ತಿದೆ. ಕಡೆಗೋಲು ಅಂಥಹದೆ ಕಣ್ಮರೆಯಾಗುತ್ತಿರುವ ಸಾಧನ. ಇದನ್ನು ಕುಂದಾಪುರದಲ್ಲಿ 'ಕಡ್ಗೋಲು' ಎಂದು ಕರೆಯುತ್ತಾರೆ. ಹೆಸರೇ ಸೂಚಿಸುವಂತೆ ಮೊಸರು ಕಡೆಯುವ ಕೋಲು; ಹಾಲನ್ನು ಕರೆದು ಕಾಯಿಸಿ, ಹೆಪ್ಪುಹಾಕಿ ಅದನ್ನು ಮೊಸರನ್ನಾಗಿ ಮಾರ್ಪಡಿಸಿ ಕಡೆದಾಗ ಬೆಣ್ಣೆ ದೊರಕುತ್ತದೆ.

ಹಿಂದಿನಿಂದಲೂ ಮೊಸರು ಕಡೆಯುವ ಕಡೆಗೋಲಿಗೆ ಅಡುಗೆ ಮನೆಯಲ್ಲಿ ಒಂದು ಪ್ರತ್ಯೇಕವಾದ ಸ್ಥಾನವಿತ್ತು. ಇದನ್ನು ಹೆಚ್ಚಾಗಿ ಅಡುಗೆ ಮನೆಯ ಪೂರ್ವಕ್ಕೆ ಇಡುತ್ತಿದ್ದರು. ಪ್ರಪಂಚದಲ್ಲಿ ಇದರ ಕಲ್ಪನೆಯನ್ನು ಗಮನಿಸುವುದಾದರೆ ರಾಕ್ಷಸರು ಮತ್ತು ದೇವತೆಗಳು ಅಮೃತ ಪಡೆಯುವ ಸಲುವಾಗಿ ಮಂದರ ಪರ್ವತವನ್ನು ವಾಸುಕಿ ಸರ್ಪದಿಂದ ಸುತ್ತಿ ಮಥಿಸಲು ಪ್ರಾರಂಭಿಸಿದರು. ಆಗ ಒಂದರ ಹಿಂದೆ ಒಂದರಂತೆ ಅಮೂಲ್ಯ ವಸ್ತುಗಳೂ, ಹಾಲಾಹಲ ವಿಷವೂ ಉದ್ಭವವಾದವು. ಅಂತಿಮವಾಗಿ ಅಮೃತವು ದೊರೆಯಿತು. ಬಹುಶಃ ಗ್ರಾಮೀಣ ಜನರ ಕಡೆಗೋಲಿನ ಪರಿಕಲ್ಪನೆಗೆ ಸಮುದ್ರ ಮಥನವೇ ಕಾರಣವಿರಬಹುದೆ?. ದ್ವಾಪರಯುಗದಲ್ಲಿ ಈ ಉಪಕರಣದ ಪ್ರಸ್ತಾಪವನ್ನು ಕಾಣಬಹುದಾಗಿದೆ .ಉಡುಪಿ ಮಠದಲ್ಲಿ ಆರಾಧಿಸಲ್ಪಡುವ ವಿಶ್ವವಿಖ್ಯಾತ ಶ್ರೀ ಕೃಷ್ಣ ಮೂರ್ತಿಯು ಕಡೆಗೋಲು ಮೂರ್ತಿ ಎಂಬ ಪ್ರತೀತಿ ಇದೆ.

ಹೀಗೆ ಕಡೆಗೋಲಿನ ಬಗೆಗೆ ಅನೇಕ ದಂತಕಥೆಗಳಿದ್ದು, ರಚನೆಯು ತುಂಬಾ ವಿಶಿಷ್ಟವಾಗಿದೆ. ಇದು ಸಾಮಾನ್ಯವಾಗಿ ಗದೆಯನ್ನು ಹೋಲುತ್ತದೆ. ಅಂದರೆ, ಕೆಳಭಾಗವು ದಪ್ಪವಾಗಿ ಗುಂಡಾಗಿರುವುದು ಮೇಲಕ್ಕೆ ಹೋದಂತೆ ಸಣ್ಣದಾಗುತ್ತಾ ಹೋಗುತ್ತದೆ. ಒಂದು ಹಗ್ಗವನ್ನು ಕಡೆಗೋಲಿಗೂ ಕಂಬಕ್ಕೂ ಜೋಡಿಸಿಕೊಂಡು ಹಗ್ಗವನ್ನು ಹಿಂದಕ್ಕೂ ಮುಂದಕ್ಕೂ ಮಾಡುತ್ತಾ ಕೋಲು ಚಲಿಸುವಂತೆ ಮಾಡಲಾಗುತ್ತದೆ. ಆಗ ಮೊಸರು ಮಥನಕ್ಕೊಳಗಾಗಿ ಮಜ್ಜಿಗೆಯಾಗುವುದು ಮತ್ತು ಕ್ಷೀರ ಸಾಗರವನ್ನು ಕಡೆದಾಗ ಕೊನೆಯಲ್ಲಿ ಅಮೃತವು ಬರುವಂತೆ ಇಲ್ಲಿ ಬೆಣ್ಣೆ ಕಾಣಿಸಿಕೊಳ್ಳುತ್ತದೆ. ಬೆಣ್ಣೆಗೆ ಸ್ವಲ್ಪ ಸ್ವಲ್ಪ ನೀರನ್ನು ಹಾಕಿದಾಗ ಬೆಣ್ಣೆಯನ್ನು ಉಂಡೆ ಮಾಡಲು ಸಾಧ್ಯವಾಗುವುದು.

ಗ್ರಾಮೀಣ ಜನರ ಬದುಕಿನಲ್ಲಿ ಅವಿಭಾಜ್ಯ ಅಂಗವಾದ ಕಡೆಗೋಲು ಇಂದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಯಾಂತ್ರಿಕತೆ ಇಂದು ದಿನೇ ದಿನೇ ತನ್ನ ವ್ಯಾಪ್ತಿಯನ್ನು ಹೆಚ್ಚಿಸುತ್ತಿವೆ. ಇಲೆಕ್ಟ್ರಾನಿಕ್ ಸಾಧನಗಳು ಇಂದು ಅನೇಕ ವಸ್ತುವಿನ ಸ್ಥಾನವನ್ನು ಆಕ್ರಮಿಸಿಕೊಂಡು ತನ್ನ ಹೆಜ್ಜೆಯನ್ನು ಪ್ರಪಂಚದಾದ್ಯಂತ ವ್ಯಾಪಿಸುತ್ತವೆ. ಸುಂದರವಾದ ಕಡಿಮೆ ಖರ್ಚಿನ ಈ ಕಡೇಗೋಲು ಪೂರ್ತಿಯಾಗಿ ಮೂಲೆ ಸೇರುತ್ತಾ, ಸಾಂಸ್ಕೃತಿಕ ಸ್ಥಿತ್ಯಂತರದ ಋಣಾತ್ಮಕ ಸೂಚಿಯಾಗುವತ್ತ ಚಲಿಸುತ್ತಿದೆ. ಅಳಿಯುವ ಮುನ್ನ ಅದನ್ನು ಬಳಸುವುದರ ಮೂಲಕ ಮೂಲ ಸೊಗಡಿನ ಬೇರು ಉಳಿಸುವತ್ತ ನಡೆಯಬೇಕಾದುದು ನಮ್ಮೆಲ್ಲರ ಕರ್ತವ್ಯ.

- ರಾಧಿಕಾ

# ಅಧ್ಯಯನಕ್ಕೊಂದು "ಪರ್ವಲೆಯ ನೆಲೆ"

ಕಾರ್ಕಳ ಎಂದ ಕೂಡಲೆ ನೆನಪಾಗುವುದು ಒಂದು ಪದುತಿ-ರುಪತಿ ಖ್ಯಾತಿಯ ವೆಂಕಟ-ರಮಣ ದೇವಾಲಯ, ಇನ್ನೊಂದು ಶ್ರವಣಬೆಳಗೊಳ ಹೊರತು ಪಡಿಸಿದರೆ ಅತೀ ಎತ್ತರವಿರುವ ಬಾಹುಬಲಿ, ಹೆಬ್ಬಂಡೆಯ ಶಿರೋಭಾಗದಲ್ಲಿ ಕಂಗೊಳಿಸುವ ಚತುರ್ಮುಖ ಬಸದಿ, ಮತ್ತೊಂದು ಸುಮಾರು 750 ವರ್ಷಗಳ ಇತಿಹಾಸವಿರುವ ಆನೆಕೆರೆ, ಮಗದೊಂದು ಭಾವೈಕ್ಯತೆ ಸಾರುವ ಸಂತ ಲಾರೆನ್ಸ್ ನ ಅತ್ತೂರು ಕ್ಷೇತ್ರ. ಓ ಹೌದು, ಅತ್ತೂರು ಎಂದಾಗ ನೆನಪಿಗೆ ಬರುವುದು ಅದರ ಎಡ ಬದಿಗೆ ಅಂದರೆ ಕಾರ್ಕಳ ಪೇಟೆಯಿಂದ ಸುಮಾರು ಎರಡು ಕಿ.ಮಿ ದೂರದ ಹಿರಿಯಂಗಡಿಯ ಬಳಿ ಇರುವ "ಪರ್ವಲೆ ಗುಡ್ಡೆ". ಈ ಗುಡ್ಡೆಯ ಬೆಟ್ಟವನ್ನು ದೂರದಿಂದ ವೀಕ್ಷಿಸಿದರೆ ಯಾವುದೊ ಒಂದು ಪ್ರಾಣಿಯ ಬಾಗಿದ ಬೆನ್ನಿನಂತೆ ಕಂಡು ಬರುತ್ತದೆ.

ಈ ಬೆಟ್ಟದ ಮಧ್ಯಭಾಗದಲ್ಲಿ ಶಿಲಾಯುಗದ್ದೆಂದು ಹೇಳಬಹುದಾದ ಪೂರ್ವಕ್ಕೆ ಮುಖವಿರುವ ಮುರಕಲ್ಲು ಗವಿ ಇದೆ. ಇದು ಸಾಮಾನ್ಯ ಮಟ್ಟಕ್ಕಿಂತ ಸ್ವಲ್ಪ ಎತ್ತರದ ಪ್ರದೇಶವಾಗಿರುವುದರಿಂದ ಪರ್ವಲೆ ಗುಡ್ಡೆ ಎಂದು ಕರೆಯುತ್ತಾರೆ. ಹೊರಗಿನ ನೋಟಕ್ಕೆ ಗುಹೆಯು ಗಮನ ಸೆಳೆಯುತ್ತಿಲ್ಲ. ಒಳಕ್ಕೆ ಇಣುಕಿದಾಗ ಇದು ಆಸಕ್ತಿದಾಯಕವಾಗಿದೆ. ಗವಿಯ ಮುಂದೆ ಕಿರಿದಾದ ಸಣ್ಣ ಕಣಿವೆ, ಅಲ್ಲಿ ಸಣ್ಣದಾದ ಝರಿ, ಗುಹೆಯ ಬಲಭಾಗದಲ್ಲಿ ಒಂದು ಪಾಳು ಬಾವಿ ಇದೆ. ಆವರಣದ ರಚನೆಯಲ್ಲಿ ಸಣ್ಣ ಸಣ್ಣ ತೂತುಗಳಿದ್ದು ತೇವಪೂರಿತ ಮಣ್ಣಿನಲ್ಲಿ ಪ್ರಾಣಿಗಳ ಉಗುರಿನ ಗುರುತು ಕಂಡುಬರುವುದರಿಂದ ಯಾವುದೋ ಪ್ರಾಣಿಗೆ ಆಶ್ರಯ ನೀಡುತ್ತಿದೆಯೊ ಎಂಬಂತೆ ಭಾಸವಾಗುತ್ತದೆ. ಗುಹೆಯ ಎಡಭಾಗದಲ್ಲಿ ಒಂದು ಸುರಂಗದಂತಹ ರಚನೆ ಇದೆ.

ವಿಜಯನಗರದ ಆಡಳಿತದ ನಂತರ ಕಾರ್ಕಳವು ಹೈದರ್ ಆಲಿ ಹಾಗೂ ಟಿಪ್ಪು ಸುಲ್ತಾನನ ಸ್ವಾಧೀನದಲ್ಲಿತ್ತು ಎನ್ನಲಾಗಿದೆ. ಟಿಪ್ಪು ಸುಲ್ತಾನನು ಈಗಿನ ಸರಕಾರಿ ಆಸ್ಪತ್ರೆಯ ಸಮೀಪದಲ್ಲಿ ಒಂದು ಮಹಾನ್ ಕೋಟೆಯನ್ನು



ನಿರ್ಮಿಸಿದ್ದನು. ಆತ ನಿರ್ಮಿಸಿದ ಬೃಹತ್ ಕೋಟೆಗೆ ಕೋಟೆಕಣಿ ಎಂದು ಹೆಸರುವಾಸಿಯಾಗಿದೆ. ಪರ್ವಲೆ ಗುಹೆಯೊಳಗಿನ ಒಂದು ದಾರಿ ಕಾರ್ಕಳದಲ್ಲಿದ್ದ ಟಿಪ್ಪು ಸುಲ್ತಾನನ ಕೋಟೆಗೂ(ಕೋಟೆಕಣಿ) ಇನ್ನೊಂದು ಶ್ರೀರಂಗಪಟ್ಟಣಕ್ಕೂ ಹೋಗುತ್ತದೆ ಎಂದು ಹೇಳುತ್ತಾರೆ. ಅಲ್ಲಿ ದೊಡ್ಡ ಗಾತ್ರದ ಮರಗಳು, ಹರಿದು ಹೋಗುವಂತಹ ಜಲಪಾತ ಕಂಡು ಬರುತ್ತದೆ. ಇದನ್ನೆಲ್ಲ ಗಮನಿಸಿದಾಗ ಇಲ್ಲಿ ನಾಗರಿಕತೆಯ ಜೊತೆಗೆ ಜನಜೀವನ ಬೆಳೆದು ಬಂದಿತ್ತು. ಒಟ್ಟಿನಲ್ಲಿ ಈ ಪರಿಸರ ಹಿಂದು ಮುಸ್ಲಿಂ ಕ್ರೈಸ್ತರಿಗೆ ಪವಿತ್ರವಾಗಿದೆ.

- ಪುಷ್ಪಕುಮಾರಿ

# ಶಿಲ್ಪಿಯೊಬ್ಬನ ಸಿನಿಮಾ ಕಥನ

ಕಲೆ, ಸಂಗೀತ ಎನ್ನುವುದು ಎಲ್ಲ–ರಿಗೂ ಬರುವಂತದ್ದಲ್ಲ. ಇಷ್ಟಪಟ್ಟು ಕಲಿತು ಏಕಾಗ್ರತೆಯ ಚಿತ್ತದಿಂದ ಅಭ್ಯಾಸಮಾಡಿದರೆ ಮಾತ್ರ ಒಲಿಯುವುದು. ಸಂಗೀತವನ್ನೇ ಧ್ಯೇಯವಾಗಿಸಿಕೊಂಡು ನಂಬಿಕೆ ಇಟ್ಟು ಶ್ರದ್ಧೆಯಿಂದ ಹಿಂಬಾಲಿಸಿ ಬಂದವರಿಗೆ ಸಂಗೀತ ಯಾವತ್ತೂ ನಡುನೀರಿನಲ್ಲಿ ಕೈಬಿಟ್ಟ ನಿದರ್ಶನವಿಲ್ಲ. ಅಂತಹದ್ದೇ ಒಬ್ಬ ವ್ಯಕ್ತಿ ಸಂಗೀತವನ್ನು ನಂಬಿಕೊಂಡು ಯಶಸ್ಸು ಗಳಿಸಿದ ಕಥೆ ಇದು.

ಯಶಸ್ಸಿನ ಹಾದಿಯಲ್ಲಿ ಕಷ್ಟ, ಸುಖ, ಕಲ್ಲು–ಮುಳ್ಳು ಇದ್ದದ್ದೆ. ಆ ಎಲ್ಲ ಕಷ್ಟಗಳನ್ನ ಮೆಟ್ಟಿನಿಂತು ಎತ್ತರಕ್ಕೆ ಬೆಳೆದು ಇಂದು ನಮ್ಮ ಮುಂದೆ ಒಬ್ಬ ಸಾಧಕನಾಗಿ ನಿಂತಿರುವುದು ಬೇರೆ ಯಾರು ಅಲ್ಲ ಅವರೆ ನಮ್ಮ ಕುಂದಾಪುರದ ರವಿ ಬಸ್ರೂರು

ಕುಂದಾಪುರ ತಾಲೂಕಿನ ಬಸ್ರೂರು ಗ್ರಾಮದಲ್ಲಿ ಕಲ್ಲಿನ ಶಿಲ್ಪ ಕೆತ್ತನೆಮಾಡುವ ಶಿಲ್ಪಿಗಳ ಮನೆಯಲ್ಲಿ 1983ರ ಜನವರಿ ಒಂದರಂದು ಜನಿಸಿದರು. ಮನೆಯವರು ಇವರಿಗೆ ಇಟ್ಟ ಹೆಸರು ಕಿರಣ ಎಂದು ಮನೆಯಲ್ಲಿದ್ದ ಬಡತನ ಇವರನ್ನ ತಮ್ಮ ಎಂಟನೇ ತರಗತಿಗೆ ಶಿಕ್ಷಣವನ್ನು ತೊರೆದು ಮನೆಯ ಕುಲಕಸುಬು ಶಿಲ್ಪಕೆತ್ತುವ ಕೆಲಸಕ್ಕೆ ಹಚ್ಚುತ್ತದೆ. ಚಿಕ್ಕವಯಸ್ಸಿನಲ್ಲಿಯೇ ತುಂಬಾ ಸುಂದರವಾಗಿ ಶಿಲ್ಪಕೆತ್ತನೆ ಮಾಡುತ್ತಿದ್ದರೂ ಮನದ ಯಾವದೊ ಒಂದು ಮೂಲೆಯಲ್ಲಿ ಅವಿತು ಕುಳಿತಿದ್ದ ಸಂಗೀತ ಇವರನ್ನ ಕೈ ಬೀಸಿ ಕರೆಯುತ್ತಿತ್ತು.

ಗಿಟಾರ್ ಮತ್ತು ಕೀಬೊರ್ಡನ್ನು ಕಲಿತು ನಂತರ ಅದರಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಹಂಬಲ ಮನೆಯಲಿದ್ದ ಬಡತನದಿಂದಾಗಿ ಯಾವುದೇ ಪ್ರೋತ್ಸಾಹ ದೊರೆಯುವದಿಲ್ಲ.

ಎಲ್ಲ ಬಿಟ್ಟು ಶಿಲ್ಪ ಕೆತ್ತನೆ ಕೆಲಸ ಹುಡುಕಿಕೊಂಡು ಮುಂಬೈಗೆ ಹೋಗುತ್ತಾರೆ. ಎಲ್ಲಿ ಹೋದರು ಬಿಡದ ಸಂಗೀತದ ಹುಚ್ಚು ಅವರನ್ನ ಸುಮ್ಮನೆ ಕೂಳಿತುಕೊಳ್ಳಲು ಬಿಡಲಿಲ್ಲ. ಕೆಲಸದ ಬಿಡುವಿನ ಸಮಯದಲ್ಲಿ ಎಲ್ಲಾದರು ಹಾಡಲು ಅವಕಾಶ ಸಿಕ್ಕಿತೆಂದು ಹುಡುಕುವಾಗ ಅಲ್ಲಿನ ಒಂದು ಕ್ಲಬ್‌ನ ಬ್ಯಾಂಡ್‌ನಲ್ಲಿ ಹಾಡುವದಕ್ಕೆ ಅವಕಾಶವು ಸಿಗುತ್ತದೆ. ದುರದೃಷ್ಟ ಎಂದರೆ ಅವರು ಹಾಡಲು ಹೋಗುವ ದಿನವೆ ಆ ಕ್ಲಬ್‌ನ ಮೇಲೆ ಪೊಲೀಸ್ ದಾಳಿ ನಡೆದು ಅಲ್ಲಿಯೂ ಕೂಡ ಅವಕಾಶ ಕೈ ತಪ್ಪುತ್ತದೆ.




ಎಲ್ಲ ಬಿಟ್ಟು ಮತ್ತೆ ಅಲ್ಲಿಂದ ಊರಿಗೆ ಬರಬೇಕೆಂದು ನಿರ್ಧರಿಸಿ ಹೊರಡುವಾಗ ಅದೇ ಸಮಯಕ್ಕೆ ಮುಂಬೈನಲ್ಲಿ 2008 ರಲ್ಲಿ ಬಾಂಬ್ ದಾಳಿ ನಡೆದಿತ್ತು. ಎಲ್ಲಾ ಕಡೆಗಳಲ್ಲಿ ಪೊಲೀಸರಿಂದ ತಪಾಸಣಾ ಕಾರ್ಯನಡೆಯುತ್ತಿತ್ತು. ಇವರು ರೈಲು ನಿಲ್ದಾಣಕ್ಕೆ ಬಂದಾಗ ಅಲ್ಲಿ ತಪಾಸಣೆ ನಡೆಸುತ್ತಿದ್ದ ಪೊಲೀಸ್ ಅಧಿಕಾರಿ ಇವರ ಹೆಗಲಿಗೆ ಹಾಕಿಕೊಂಡಿದ್ದ ಕೀ ಬೋರ್ಡ ಮತ್ತು ಗಿಟಾರ್‌ನ್ನು ಒಡೆದು ಹಾಕುತ್ತಾರೆ ಅವರಿಗಿದ್ದ ಎರಡು ಆಸ್ತಿಗಳೇ ಈ ಕೀ ಬೋರ್ಡ್ ಮತ್ತು ಗಿಟಾರ್ ಇದಲ್ಲದೆ ಅವರಿಗೆ ಒದಗಿದ ಮತ್ತೊಂದು ಸಂಕಟ ಎಂದರೆ ಊರಿಗೆ ಬರುವದಕ್ಕೆ ಕೈಯಲ್ಲಿ ಒಂದು ಬಿಡಿಗಾಸು ಕೂಡ ಇಲ್ಲ. ಟಿಕೆಟ್ ಇಲ್ಲದೆ ಮಂಗಳೂರಿಗೆ ಬರುವ ರೈಲು ಹತ್ತಿ ಟಿಕೇಟು ಪರೀಕ್ಷಕನ ಕಣ್ಣು ತಪ್ಪಿಸಲು ಶೌಚಾಲಯದಲ್ಲೇ ಅಡಗಿ ಕುಳಿತು ಹೆಗೋ ಊರು ತಲುಪುತ್ತಾರೆ.

ಅವರಿಗಿದ್ದ ಸಂಗೀತದ ಹುಚ್ಚು ಮತ್ತು ಕೀಬೊರ್ಡ್ ಕೊಂಡುಕೊಳ್ಳುವ ಉದ್ದೇಶದಿಂದ ಎಲ್ಲೋ ಒಂದು ಜಾಹಿರಾತು ಕಂಡು ಕಿಡ್ನಿ ಮಾರಲು ಮುಂದಾಗುತ್ತಾರೆ. ಮನೆಯವ–ರಿಗೆ, ಗೆಳೆಯರಿಗೆ ಯಾರಿಗೂ ಹೇಳದೆ ಮಂಗಳೂರಿನ ಒಂದು ಆಸ್ಪತ್ರೆಗೆ ಹೋಗಿ ಅವರ ಕರಾರು ಪತ್ರಕ್ಕೆ ಸಹಿಮಾಡಿ ಬೆಡ್ ಮೇಲೆ ಮಲಗಿದ್ದಾಗ ಎನೋ ಹೊಳೆದಂತಾಗಿ ಗೊತ್ತಿಲ್ಲದೆ ಅವರು ನನ್ನ ಎರಡು ಕಿಡ್ನಿ ತೆಗೆದಾರು ಎಂದು ಆಲೋಚಿಸಿ ಅಲ್ಲಿಂದ ತಪ್ಪಿಸಿಕೊಂಡು ಬಂದು ಮಂಗಳೂರು ಬಸ್ ನಿಲ್ದಾಣದಲ್ಲಿ ಕುಳಿತಿರುವಾಗ: ಮಂಗಳೂರಿನ ಕಲಾ ಸಂಸ್ಥೆ ನೌಶಾದ್ಸ್ ಆರ್ಟ್ಸ್ ನಲ್ಲಿ ಮೂರು ದಿನಗಳ ವರಗೆ ಹಾಡುವ ಒಂದು ಅವಕಾಶ ದೊರೆಯುತ್ತದ? ಅದರಿಂದ ಬಂದ ಹಣ ತೆಗೆದುಕೊಂಡು ನೇರವಾಗಿ ಬೆಂಗಳೂ–ರಿಗೆ ಹೋರಟು ಬರುತ್ತಾರೆ.

ಅಲ್ಲಿ ಒಂದು ಸಾರಿ ಆತ್ಮಹತ್ಯೆಗೂ ಪ್ರಯತ್ನಿಸುತ್ತಾರೆ ಆಗ ಇವ–ರಿಗೆ ಕೆಲಸಕೊಡುತಿದ್ದ ಎಮ್ ಕೆ ಕಾಮತ್‌ರು ಇವರನ್ನ ಒಬ್ಬ ಜುವೆಲ್ಲರಿ ವ್ಯಾಪಾರಸ್ತರ ಹತ್ತಿರಕ್ಕೆ ಕರೆದುಕೊಂಡು ಹೋದಾಗ ಅವರು ಮುಂದೆ ಇವನೊಬ್ಬ ಸಾಧಕನಾಗುತ್ತಾನೆ ಎಂದು ಭವಿಷ್ಯ ನುಡಿಯತ್ತಾರೆ. ಸಂಗೀತದಲ್ಲಿ ಎನಾದರೂ ಸಾಧಿಸಬೇಕೆಂಬ ಇವರ ಛಲವನ್ನು ಕಂಡು ಸಂಗೀತ ವಾದ್ಯ ಖರೀದಿಸಲು ಮೂವತ್ತು ಸಾವಿರ ಹಣ ಸಹಾಯ ಮಾಡುತ್ತಾರೆ.

ನಂತರ ಅವರ ನೆನಪಿಗಾಗಿ ತಮ್ಮ ಹೆಸರನ್ನ ಕಿರಣ ಇದ್ದಿದ್ದನ್ನು ರವಿ ಬಸ್ರೂರು ಎಂದು ಬದಲಾಯಿಸಿಕೋಳ್ಳುತ್ತಾರೆ.

ನಂತರ 92.7 ಎಫ್ ಎಮ್ ಚಾನೆಲ್ ನಲ್ಲಿ ಸೇರಿಕೊಳ್ಳುತ್ತಾರೆ. ಒಂದು ವರ್ಷ ಕಷ್ಟ ಪಟ್ಟು ಕೆಲಸ ಮಾಡಿ ಅಲ್ಲಿ ಇವರಿಗೆ "ರಾಪಾ" ಅವಾರ್ಡ್ ಕೊಡ ಸಿಗುತ್ತದೆ. ಬಿಗ್ ಎಫ್ ಎಮ್ ನಲ್ಲಿ ನಾವು ಇಂದಿಗೂ ಕೇಳುವಂತ "ರೇಡಿಯೊ ಸಿಟಿ" ಎಂಬ ಹಾಡು ಇವರಿಂದಲೇ ತಯಾರಾದದ್ದು.

ನಂತರ ಇವರ ಸಿನಿಮಾರಂಗದ ಪ್ರವೇಶವಾಗುತ್ತದೆ. ಅಲ್ಲಿ ಕೂಡ ಅವರು ಅನೇಕ ಸವಾಲುಗಳನ್ನು ಎದು–ರಿಸುತ್ತಾರೆ. ಸಿನಿಮಾರಂಗದಲ್ಲಿ ಅವರ ಬದುಕಿಗೆ ಒಂದು ನಿರ್ಣಾಯಕ ತಿರುವು ಸಿಕ್ಕಿದ್ದು ಅವರು ಮೊದಲಿಗೆ ಸಂಗೀತ ನಿರ್ದೆಶನ ಮಾಡಿದ "ಉಗ್ರಂ" ಸಿನಿಮಾದ ಹಾಡುಗಳು ದೊಡ್ಡಮಟ್ಟಿಗೆ ಸಕ್ಸಸ್ ಕಂಡು ಇಡೀ ಕನ್ನಡ ಸಿನಿಮಾ ರಂಗವೇ ಇವರತ್ತ ತಿರುಗಿ ನೊಡುವಂತೆ ಮಾಡಿತು. ಇದಕ್ಕೆ "ಕೈಮಾ ಬೆಸ್ಟ್ ಬ್ಯಾಗ್ರೌಂಡ್ ಸ್ಕೋರ್" ಮತ್ತು "ಜೀ ಮ್ಯೂಸಿಕ್" ಅವಾರ್ಡ್ ಇದಲ್ಲದೆ "ಫಿಲಂ ಫೇರ್" ಕೂಡ ಬಂದಿದೆ.

ಅಲ್ಲಿಂದ ಮತ್ತೆ ತಿರುಗಿ ನೊಡಿದ ಪ್ರಸಂಗವೆ ಇಲ್ಲ. ಜಸ್ಟ್ ಮದ್ವೆಲಿ, ಟೈಸನ್, ಕರ್ವ, ಮಫ್ತಿ, ಸಂಹಾರ, ಇತ್ತಿಚೆಗೆ ತೆರೆಕಂಡು ಉತ್ತಮ ಪ್ರಶಂಸೆ ಗಳಿಸಿದ ಅಂಜನಿಪುತ್ರ, ಅನೇಕ ಕನ್ನಡ ಸಿನಿಮಾಗಳು ಮತ್ತು ಕುಂದಾಪುರ ಕನ್ನಡದಲ್ಲಿ 2016ರ ರಲ್ಲಿ ತೆರೆಕಂಡ ತಮ್ಮದೆ ಸಂಗೀತ ನಿರ್ದೆಶನ, ನಿರ್ಮಾಣ, ಕಥೆ, ನಿರ್ದೇಶನ, ನಾಯಕನಟನಾಗಿ ಅಭಿನಯಿಸಿದ "ಬಿಲೀಂಡರ್" ಗರ್ಗ್‌ರ್ ಮಂಡ್ಲ, ಅಲ್ಲದೆ ತುಳುವಿನ ಎಕ್ಕಸಕ ಚಿತ್ರಕ್ಕೂ ಇವರ ಸಂಗೀತ ನಿರ್ದೆಶನವಿದೆ

ಕಟಕ, ಕೆ.ಜಿ.ಫ್, ಬಜಾರ್ ಮುಂತಾದ ಚಿತ್ರಗಳು ಇವರ ಕೈಯಲ್ಲಿವೆ. ಇವರ ವಿಭಿನ್ನ ಶೈಲಿಯ ಸಂಗೀತ ನಿರ್ದೆಶನ ಇವರನ್ನ ಕನ್ನಡ ಚಿತ್ರರಂಗದ ಉತ್ತಮ ಸಂಗೀತ ನಿರ್ದೆಶಕರ ಸಾಲಿಗೆ ತಂದು ನಿಲ್ಲಿಸಿವೆ.

–ಶಿವಾನಂದ

## ಚಿತ್ರ ವಿಮರ್ಶೆ

# ಗುಳ್ಟು – ತಂತ್ರಜ್ಞಾನದ ಮುಂದೆ ಬೆಪ್ಪಾದವರ ಕಥೆ

ಹೊಸಬರ ಎಷ್ಟೋ ಸಿನಿಮಾಗಳು ಸೋಲುವುದು ಕಥೆ ಹೇಳುವ ವಿಧಾನದಲ್ಲಿ. ಚಿತ್ರ ವೀಕ್ಷಿಸಿದ ಬಳಿಕ ಅರೇ, ಕಥೆ ಚೆನ್ನಾಗಿದೆ, ಇನ್ನಷ್ಟು ಉತ್ತಮವಾಗಿ ಕಟ್ಟಿಕೊಡಬಹುದಿತ್ತು ಎನ್ನುವ ಥಾಟ್ ನಮ್ಮಲ್ಲಿ ಬಂದಿರುತ್ತದೆ. ಇಲ್ಲಿ ಕಥೆಯನ್ನು ಚಿತ್ರವಾಗಿ ಕಟ್ಟಿಕೊಡುವ ವೇಳೆ ನಿರ್ದೇಶಕನಿಗಾಗುವ ಒಂದಷ್ಟು ಗೊಂದಲ, ಹಾಗೂ ಇನ್ನಿತರ ಕಾರಣಗಳು ಸೇರಿ ಸಿನಿಮಾ ಸೋಲಿಗೆ ಮುನ್ನುಡಿ ಬರೆಯುತ್ತದೆ. ಪರಿಣಾಮ ಉತ್ತಮ ಆರಂಭ ನೀಡಿ ಮಧ್ಯಂತರ ತಲುಪುವ ವೇಳೆ ಕಥೆಯ ಹಿಡಿತ ತಪ್ಪಿ ಇನ್ನೆಲ್ಲೋ ಸಾಗಿರುತ್ತದೆ. ಆದರೆ ಈ ವಾರ ತೆರೆಗೆ ಬಂದ ಗುಳ್ಟು ಸಿನಿಮಾ ಇವೆಲ್ಲದಕ್ಕೂ ದೊಡ್ಡ ಅಪವಾದವಾಗಿ ನಿಲ್ಲುತ್ತದೆ. ಈ ಚಿತ್ರದಲ್ಲಿ ಕಥೆಯ ಅಪ್ರೋಚ್ ಸಹ ಹೊಸತನದಿಂದ ಕೂಡಿದೆ. ನೋಡುಗನಿಗೆ ಎಲ್ಲಿಯೂ ಬೋರಿಂಗ್ ಅನಿಸದಂತೆ ಸಂಪೂರ್ಣ ಸಿನಿಮಾ ಲವಲವಿಕೆಯಿಂದ ತಯಾರಾಗಿದೆ.

ಪ್ರಸ್ತುತ ಹ್ಯಾಕಿಂಗ್ ಅನ್ನುವ ವಿಚಾರ ಸರ್ವೇಸಾಮಾನ್ಯವಾಗಿದ್ದರೂ ಅದರಾಚೆಗಿನ ವಿಷಯವನ್ನು ತಿಳಿದವರು ಅಥವಾ ತಿಳಿಯಲು ಉತ್ಸಾಹ ಇರುವವರು ಕಮ್ಮಿ. ತಂತ್ರಜ್ಞಾನ ಅತಿಯಾದ ಬಳಕೆಯಲ್ಲಿ ಅದರ ಗಂಭೀರತೆಯನ್ನು ನಾವುಗಳು ಬಹುತೇಕ ಮರೆತಿದ್ದೇವೆ. ಹೀಗೆ ಮರೆತಿರುವ ಟೈಮಲ್ಲಿ ಈ ಹ್ಯಾಕಿಂ–ಗ್ ಸ್ಟೋರಿ ಕನ್ನಡದಲ್ಲಿ ಸಿನಿಮಾವಾಗಿ ಬಂದಿದೆ. ಈ ಜಮಾನದ ಸಿನಿಮಾವಾಗಿ ತೆರೆಯ ಮೇಲೆ ನಮ್ಮನ್ನು ಬಡಿದೆಚ್ಚ–ರಿಸುತ್ತಿದೆ. ಜೊತೆಯಲ್ಲಿ ತಂತ್ರಜ್ಞಾನದ ಮಿತಿಮೀರಿದ ಬಳಕೆಯಲ್ಲಿ ನಾವೆಷ್ಟು ಬೆಪ್ಪಾಗುತ್ತಿದ್ದೇವೆ ಎನ್ನುವ ಭಯಾನಕ ಸತ್ಯ ತೆರೆದಿಟ್ಟಿದೆ.

ನಮ್ಮೆಲ್ಲಾ ಮಾಹಿತಿಯನ್ನು ಪಡೆದುಕೊಂಡು ಎಲ್ಲವೂ ತಂತ್ರಜ್ಞಾನದ ಮೂಲಕ ಸೇಫ್ ಅಂತಿರೋ ಹಲವರಿಗೆ ಇದು ಎಚ್ಚರಿಕೆ ಘಂಟೆ ಎನ್ನಬಹುದು. ಇಂತಹ ಗಂಭೀರ ವಿಷಯದ ಮೇಲೆ, ಅದೂ ಹ್ಯಾಕಿಂಗ್ ಕುರಿತಂತೆ ಕನ್ನಡದಲ್ಲಿ ಬಹುಶಃ ಇತ್ತೀಚಿನ ವರ್ಷದಲ್ಲಿ ಇಷ್ಟೊಂದು ಅಚ್ಚುಕಟ್ಟಾದ ಸಿನಿಮಾ ಬಂದಿರಲಿಲ್ಲ. ನಿರ್ದೇಶಕ ಜನಾರ್ದನ್ ಚಿಕ್ಕಣ್ಣ ಇಂತಹದ್ದೊಂದು ಕಥ–'ಯನ್ನಿಟ್ಟುಕೊಂಡು, ತುಂಬಾ ಸೊಗಸಾಗಿ




**ಚಿತ್ರ:** ಗುಳ್ಟು
**ನಿರ್ದೇಶನ:** ಜನಾರ್ದನ್ ಚಿಕ್ಕಣ್ಣ
**ತಾರಾಗಣ:** ನವೀನ್ ಶಂಕರ್,ಸೋನು ಗೌಡ, ಅವಿನಾಶ್,ರಂಗಾಯಣ ರಘು,ಪವನ್ ಕುಮಾರ್
**ಸಂಗೀತ:** ಅಮಿತ್ ಆನಂದ್
**ಛಾಯಾಗ್ರಹಣ:** ಶಾಂತಿ ಸಾಗರ್
**ನಿರ್ಮಾಣ:** ವಿವಿದ್ ಫಿಲ್ಮ್ಸ್

ಹೇಳಿದ್ದಾರೆ. ಎಲ್ಲಿಯೂ ಗೊಂದಲಕ್ಕೆ ಎಡೆಮಾಡಿಕೊಡದೆ, ಹೇಳುವ ವಿಷಯವನ್ನು ತುಂಬಾ ಸರಳವಾಗಿ ಹೇಳಿದ್ದಾರೆ.ಪರಿಣಾಮ ವಿಷಯದ ಗಂಭೀರತೆ ನೋಡುಗನಿಗೆ ನಾಟುತ್ತದೆ. ಹೇಳಹೊರಟ ವಿಷಯ ಪರಿಣಾಮಕಾ–ರಿಯಾಗಿ ಪ್ರೇಕ್ಷಕನಿಗೆ ಅರ್ಥ ಮಾಡಿಸಿದಲ್ಲಿ ನಿರ್ದೇಶಕ ಗೆದ್ದಂತೆ. ಮೊದಲ ಚಿತ್ರದಲ್ಲೇ ನಿರ್ದೇಶಕರು ಸಾಕಷ್ಟು ಭರವಸೆ ಮೂಡಿಸಿದ್ದಾರೆ.

ಹೊಸಬರ ಸಿನಿಮಾ ಎಂದರೆ ಮೂಗು ಮುರಿಯೋ ಮಂದಿಗೆ ಚಾಲೆಂಜ್ ಹಾಕುವಂತಿದೆ ಈ ಗುಳ್ಟು. ತಾಂತ್ರಿಕವಾಗಿ ಸಿನಿಮಾ ಶ್ರೀಮಂತವಾಗಿದೆ. ಛಾಯಾಗ್ರಹಣ ಹಾಗೂ ಸಂಗೀತದಲ್ಲಿ ಈ ಚಿತ್ರ ಅದ್ಭುತ ಫೀಲ್ ನೀಡುತ್ತದೆ. ಸಂಪೂರ್ಣ ಸಿನಿಮಾ ಒಂದೇ ವೇಗದಲ್ಲಿ ಸಾಗುತ್ತದೆ, ಮೊದಲಾರ್ಧದಲ್ಲಿ ಸಾಕಷ್ಟು ಕಾಮಿಡಿ ದೃಶ್ಯಗಳು, ದ್ವಿತೀಯಾರ್ಧದ ಹಲವಾರು ಟ್ವಿಸ್ಟ್‌ಗಳು ನೋಡುಗರಿಗೆ ಭರಪೂರ ಮನರಂಜನೆ ನೀಡುತ್ತದೆ. ಮೊದಲ ಚಿತ್ರದಲ್ಲೇ ನಾಯಕ ನವೀನ್ ಶಂಕರ್ ಗೆದ್ದಿದ್ದಾರೆ. ಹ್ಯಾಕರ್ ಪಾತ್ರಕ್ಕೆ ನವೀನ್ ನ್ಯಾಯ ಒದಗಿಸಿದ್ದಾರೆ. ಸಿನಿಮಾದುದ್ದಕ್ಕೂ ತಮ್ಮ ಸಹಜ ನಟನೆಯಿಂದ ಪ್ರೇಕ್ಷಕರನ್ನು ಆವ–ರಿಸಿಕೊಳ್ಳುತ್ತಾರೆ. ಸೋನು ಗೌಡ ನಟನೆ ಉತ್ತಮವಾಗಿದೆ.

ಗುಳ್ಟು ಚಿತ್ರ ಸಂಪೂರ್ಣವಾಗಿ ಎನ್‌ಕ್ರಿಪ್ಷನ್ ಹಾಗೂ ಡಿಕ್ರಿಪ್ಷನ್ ವಿಧಾನದಲ್ಲಿ ಸಾಗುತ್ತದೆ. ಗುಳ್ಟು ಹೆಸರನ್ನು ಸಹ ಚಿತ್ರದ ಅಂತ್ಯದಲ್ಲಿ ಡಿಕ್ರಿಪ್ಟ್ ಮಾಡಲಾಗಿದೆ. ಚಿತ್ರದ ದ್ವಿತೀಯಾರ್ಧದಲ್ಲಿ ಬಹಳಷ್ಟು ದೃಶ್ಯಗಳು ಕ್ರಿಯೇಟಿವ್ ಆಗಿದೆ. ಇಂತಹ ದೃಶ್ಯಗಳೇ ಚಿತ್ರದ ಜೀವಾಳ. ಚಿತ್ರದ ಪ್ರತಿಯೊಂದು ದೃಶ್ಯವನ್ನೂ ಬಹಳಷ್ಟು ನೀಟಾಗಿ ಹೆಣೆಯಲಾಗಿದೆ. ಸೈಬರ್ ಕ್ರೈಂ, ಡಿಜಿಟಲ್ ಕಳ್ಳತನ ಭವಿಷ್ಯದಲ್ಲಿ ಎಷ್ಟರ ಮಟ್ಟಿಗೆ ಸವಾಲಾಗಲಿದೆ ಎನ್ನುವ ಕಟುಸತ್ಯ ಗುಳ್ಟುವಿನಲ್ಲಿ ಬೆತ್ತಲಾಗಿದೆ. ಹಲವು ದಿನಗಳ ಬಳಿಕ ಕನ್ನಡದಲ್ಲಿ ವಿಭಿನ್ನ ಕಥಾಹಂದರ ಹೊಂದಿದ ಸಿನಿಮಾ ನಿರ್ಮಾಣವಾಗಿದೆ. ಈ ವರ್ಷದ ಅತ್ಯುತ್ತಮ ಸಿನಿಮಾಗಳ ಸಾಲಿಗೆ ಸೇರುವ ಎಲ್ಲಾ ಅರ್ಹತೆ ಗುಳ್ಟು ಸಿನಿಮಾಕ್ಕಿದೆ.

–ಕೌಶಿಕ್ ಕೆ

**ವಿದ್ಯಾರ್ಥಿ ಸಂಪಾದಕರು**

**ಕೌಶಿಕ್ ಕೆ**
**ಶ್ವೇತಕುಮಾರಿ**
**ರಾಧಿಕಾ**
**ಪುಷ್ಪಕುಮಾರಿ**
**ಶಿವಾನಂದ**

ಸಂಪಾದಕರು ಹಾಗೂ ಪ್ರಕಾಶಕರು: ಪ್ರೊ. ವಹೀದಾ ಸುಲ್ತಾನ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ದ.ಕ,
ಕಾರ್ಯಕಾರಿ ಸಂಪಾದಕರು: ಪ್ರೊ. ಜಿ. ಪಿ. ಶಿವರಾಂ. ಮುದ್ರಕರು: ದಿಗಂತ ಮುದ್ರಣಾಲಯ, ಯೆಯ್ಯಾಡಿ, ಮಂಗಳೂರು ದ.ಕ.–575008